ರೆವರೆಂಡ್, ಡಾಕ್ಟರ್ ಫರ್ಡಿನಾಂಡ್ ಕಿಟೆಲ್

ಡಾ. ಶ್ರೀನಿವಾಸ ಹಾವನೂರ



ರೆ|| ಎಫ್. ಕಿಟೆಲ್ ಪ್ರತಿಮಾ ಸಮಿತಿ

A

KANNADA-ENGLISH

SCHOOL-DICTIONARY

CHIEFLY BASED ON THE LABOURS OF THE

REV. DR. F. KITTEL

BY THE

REV. J. BUCHER.

ಕನ್ನಡ ಮತ್ತು ಇಂಗ್ಲಿಷ್

ಶಾಲಾನಿಘಂಟು

MANGALORE
BASEL MISSION BOOK & TRACT DEPOSITORY
1899

ನಾಗವರ್ಮನ

ಕನ್ನಡಛಂದಸ್ಸು

NAGAVARMA'S

CANARESE PROSODY

EDITED WITH AN INTRODUCTION TO THE WORK AND AN ESSAY ON CANARESE LITERATURE

BY

REV. F. KITTEL

MANGALORE
BASEL MISSION BOOK & TRACT DEPOSITORY
LONDON TRÜBNER & Co. 1875 BASEL MISSIONSBUCHHANDLUNG

ಪರಮಾತ್ಮಜ್ಞಾನ

KNOWLEDGE

OF THE

SUPREME SPIRIT

A DIALOGUE ON THE HINDOO DOCTRINE OF GOD'S BEING THE AUTHOR OF SIN &

BY

THE REV. F. K

MANGALORE
PFLEIDERER & RIEHM, MISSION BOOKSHOP AND GOVT SCHOOLBOOK DEPOT
1862

ಕೇಶಿರಾಜಕವಿಯ

ಶಬ್ದಮಣಿದರ್ಪಣಂ

ನಿಷ್ಠೂರಸಂಜಯ್ಯನ ವ್ಯಾಖ್ಯಾನಂ ಸಹಿತಮಾದುದು

KESIRĀJA'S

JEWEL MIRROR OF GRAMMAR

WITH

THE COMMENTARY OF NISHṬHURASANJAYYA

[illegible] |
[illegible] |

MANGALORE
PUBLISHED BY C. STOLZ
BASEL MISSION BOOK & TRACT DEPOSITORY
1872

A

KANNAḌA-ENGLISH

SCHOOL-DICTIONARY

CHIEFLY BASED ON THE LABOURS OF THE

REV. DR. F. KITTEL

BY THE

Rev. J. BUCHER.

ಕನ್ನಡ ಮತ್ತು ಇಂಗ್ಲಿಷ

ಶಾಲಾನಿಘಂಟು

MANGALORE
BASEL MISSION BOOK & TRACT DEPOSITORY
1899

A

KANNADA-ENGLISH

DICTIONARY

BY

REV. F. KITTEL
B. G. E. M.

MANGALORE
BASEL MISSION BOOK & TRACT DEPOSITORY
1894

LONDON LUZAC & Co. | BASEL MISSIONSBUCHHANDLUNG | LEIPZIG O. HARRASSOWITZ

Ueber

den Ursprung des Lingakultus

in Indien

von

F. Kittel,

MANGALORE
BASEL MISSION BOOK & TRACT DEPOSITORY
1876

LONDON TRUBNER & Co. | BASEL MISSIONS BUCHHANDLUNG

KĀVYAMANJARI

FIRST BOOK

OF

CANARESE POETRY

WITH NOTES AND VOCABULARY

ಟೀಕೆಯೂ ನಿಘಂಟುವೂ ಸಹಿತವಾದ

ಕಾವ್ಯಮಂಜರಿ

ಕನ್ನಡದ [illegible] ಮೊದಲಿನ ಪುಸ್ತಕವು

MANGALORE
BOOK & TRACT DEPOSITORY
1877

ರೆವರೆಂಡ್, ಡಾಕ್ಟರ್
ಫರ್ಡಿನಾಂಡ್ ಕಿಟೆಲ್

ಡಾ. ಶ್ರೀನಿವಾಸ ಹಾವನೂರ

ಪ್ರಕಾಶಕರು

ರೆ। ಎಫ್. ಕಿಟೆಲ್ ಪ್ರತಿಮಾ ಸಮಿತಿ
ಸಿ.ಎಸ್.ಐ. ಮಧ್ಯ ಸಭಾಪ್ರಾಂತ
ಬೆಂಗಳೂರು - 560 027

REVEREND, DOCTOR FERDINAND KITEL : Written by Dr. Shrinivas Havanur, Published by Rev.F. Kitel Pratima Samithi, Bangalore - 27

Pages : 44

© : ಲೇಖಕರು

Price : **Rs. 15/-**

ಹದಿನೈದು ರೂಪಾಯಿಗಳು

ವಿತರಕರು :
ಸಿ.ಎಸ್.ಐ. ಕರ್ನಾಟಕ ಇಂಟರ್ ಡಯೋಸೀಸನ್
ಎ. ಎಫ್. ಪಿ. ಬೋರ್ಡ್
ಯೂನಿಟಿ ಬಿಲ್ಡಿಂಗ್ಸ್, ಆರನೆ ಮಹಡಿ
ಜೆ. ಸಿ. ರಸ್ತೆ, ಬೆಂಗಳೂರು - 560 002
ಫೋನ್ : ೨೨೩ ೮೮೬೨

ಕವರ್ : ಡಿಸೈನ್ ಬೇಸ್, ಬೆಂಗಳೂರು
ಚಿತ್ರ : ಬೆಂಗಳೂರಲ್ಲಿ ದಿ. ೬.೯.೨೦೦೧ ರಂದು
ಅನಾವರಣಗೊಂಡ ಕಿಟೆಲ್ ಪ್ರತಿಮೆಯದು

Printed at :
Sathyasri Printers Pvt. Ltd.,
No. 164, 5th Main, Chamarajpet
Bangalore - 560 010 **Phone : 6525736**

ಮುನ್ನುಡಿ

ಕನ್ನಡಕ್ಕೆ ಮೊಟ್ಟಮೊದಲ ಅಧಿಕೃತವೂ, ಶಾಸ್ತ್ರೀಯವೂ, ಮತ್ತು ವಿಸ್ತ್ರತವೂ ಆದ ಬೃಹತ್ ನಿಘಂಟೊಂದನ್ನು ಸಿದ್ದಪಡಿಸಿ ಕೊಟ್ಟು ಕನ್ನಡ ಸಹೃದಯರೆಲ್ಲರ ನೆನಪಿನಲ್ಲಿ ನಿರಂತರವಾಗಿ ಮನೆಮಾಡಿಕೊಂಡಿರುವ ರೆವರೆಂಡ್ ಎಫ್. ಕಿಟೆಲ್ ಅವರನ್ನು ಕುರಿತು, ಮಾನ್ಯ ಮಿತ್ರರೂ, ಶ್ರೇಷ್ಠ ವಿದ್ವಾಂಸರೂ ಆದ ಡಾ. ಶ್ರೀನಿವಾಸ ಹಾವನೂರ ಅವರು ಬರೆದಿರುವ ಸಾರವತ್ತಾದ ಈ ಕಿರುಕೃತಿ, ಬೆಂಗಳೂರಿನಲ್ಲಿ ಸನ್ಮಾನ್ಯ ಕಿಟೆಲ್ ಅವರ ಪ್ರತಿಮೆಯ ಅನಾವರಣ ಮಹೋತ್ಸವದ ಸಂದರ್ಭದ ನೆನಪಿಗಾಗಿ ಪ್ರಕಟಗೊಳ್ಳುತ್ತಿರುವುದು ಅತ್ಯಂತ ಉಚಿತವಾಗಿದೆ.

ಮಾನ್ಯ ಕಿಟೆಲ್ ಅವರು ಬಾಸೆಲ್ ಮಿಶನ್ನಿನ ಪ್ರತಿನಿಧಿಯಾಗಿ, ಧರ್ಮಪ್ರಸಾರದ ಉದ್ದೇಶದಿಂದ ಕರ್ನಾಟಕಕ್ಕೆ ಬಂದು, ಕನ್ನಡವನ್ನು ಕಲಿತು, ನಿರಂತರ ಪರಿಶ್ರಮದಿಂದ ಕನ್ನಡ ಭಾಷಾ - ಸಾಹಿತ್ಯ ಪರಂಪರೆಯನ್ನು ಅರಗಿಸಿಕೊಂಡು, ಭಾರತದ ವಸಾಹತುಷಾಹೀ ಸಂದರ್ಭದ ಕನ್ನಡದ ಪುನರುಜ್ಜೀವನಕ್ಕೆ ಅಗತ್ಯವಾದ ವಿದ್ವತ್ ಕ್ಷೇತ್ರದ ಅನೇಕ ಮೊದಲ ಕೆಲಸಗಳಿಗೆ ತಳಹದಿಯನ್ನು ಹಾಕಿಕೊಟ್ಟವರು. ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾದ ಪಠ್ಯ ಪುಸ್ತಕಗಳ ನಿರ್ಮಾಣ, ಹಳಗನ್ನಡ ಕಾವ್ಯಭಾಗಗಳ ಆಯ್ದ ಸಂಕಲನ, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆ, ಅನುವಾದ, ಛಂದಸ್ಸು ವ್ಯಾಕರಣ ಕೃತಿಗಳ ಪ್ರಕಟಣೆ, ಮತ್ತು ನಿಘಂಟು - ಇಂಥ ಹಲವು ಕೊಡುಗೆಗಳಿಂದಾಗಿ, ಇಂದು ಕಿಟೆಲ್ ಅವರು ಕನ್ನಡ ಸಂಸ್ಕೃತಿಯ ಒಂದು ಭಾಗವಾಗಿದ್ದಾರೆ; ಪ್ರಾತಃಸ್ಮರಣೀಯರಾಗಿದ್ದಾರೆ.

ಇಂಥ ವ್ಯಕ್ತಿತ್ವದ ಹಲವು ಮಗ್ಗುಲುಗಳನ್ನೂ, ಸಾಧನೆಗಳನ್ನೂ, ಮತ್ತು ತನ್ನ ಧಾರ್ಮಿಕ ಬದ್ಧತೆಯನ್ನೂ ಮೀರಿ, ವಿಕಾಸಗೊಂಡ ಅವರ ಸಾರಸ್ವತ ವ್ಯಕ್ತಿತ್ವದ ಮಹೋನ್ನತಿಯನ್ನೂ ಡಾ. ಹಾವನೂರ ಅವರು ಈ ಕೃತಿಯಲ್ಲಿ ಚಿತ್ರಿಸಿರುವ ಕ್ರಮವು ಪ್ರಶಂಸನೀಯವಾಗಿದೆ. ಕಿಟೆಲ್ ಪ್ರತಿಮಾ ಸಮಿತಿಯ ಪರವಾಗಿ ಡಾ. ಹಾವನೂರ ಅವರಿಗೆ ವಂದನೆಗಳು.

ಡಾ. ಜಿ.ಎಸ್. ಶಿವರುದ್ರಪ್ಪ

ಸೆಪ್ಟಂಬರ್ 2001

ಅಧ್ಯಕ್ಷರು : ಕಿಟೆಲ್ ಪ್ರತಿಮಾ ಸಮಿತಿ

ಪೀಠಿಕೆ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ರೆ. ಕಿಟೆಲ್ ಕರ್ನಾಟಕಕ್ಕೆ ಬಂದರು. ಆ ಅವಧಿಯಲ್ಲಿ ಭಾರತೀಯ ಪ್ರಾಚ್ಯ ಇತಿಹಾಸ, ಧರ್ಮ, ಭಾಷೆ, ಸಾಹಿತ್ಯ ಕ್ಷೇತ್ರಗಳಲ್ಲಿ ಯುರೋಪಿಯನ್ ವಿದ್ವಾಂಸರು ಗಣನೀಯ ಮಟ್ಟದಲ್ಲಿ ಕಸಿ ಮಾಡಿದ್ದರು. ದ್ರಾವಿಡ ಭಾಷಾ ವಿಚಾರವಾಗಿ ಕಾಲ್ಡ್‌ವೆಲ್, ಶಾಸನ ಶೋಧದಲ್ಲಿ ಬರ್ಗೆಸ್, ಫ್ಲೀಟ್, ರೈಸರು; ಧಾರ್ಮಿಕ ಕ್ಷೇತ್ರದಲ್ಲಿ ಮ್ಯಾಕ್ಸ್‌ಮುಲರ್, ಶಿಲ್ಪಕಲಾ ರಂಗದಲ್ಲಿ ಮೆಡೋಜ್-ಟೇಲರ್, ಫರ್ಗ್ಯುಸನ್, ಮೊದಲಾದವರ ಕೊಡುಗೆಯಿಂದ ದೇಶದ ಸಾಂಸ್ಕೃತಿಕ ಪರಂಪರೆಯನ್ನು ಸಮಗ್ರವಾಗಿ ರೂಪಿಸುವುದು ಸಾಧ್ಯವಾಯಿತು. ಡಾ. ಕಿಟೆಲ್ ಅವರೂ ಈ ವಿದ್ವತ್ಪ್ರಚಂಡರ ಸಾಲಿನಲ್ಲಿ ಗಣಿಸಲ್ಪಡುತ್ತಿದ್ದರು. ಇತ್ತ ಗುಂಡರ್ಟ, ಬ್ರೌನರು ಮಲೆಯಾಳಿ, ತೆಲುಗು ಕೋಶಗಳನ್ನು ರಚಿಸಿದ್ದಾಗ, ಕಿಟೆಲ್ಲರ ಕನ್ನಡ ಕೋಶವು ಹೊರಬಂದಿತು, ಮಾತ್ರವಲ್ಲ ವೈದುಷ್ಯದಲ್ಲಿ ಇವರುಗಳ ಕೃತಿಗಳಿಗಿಂತಲೂ ಮೇಲ್ಪಟ್ಟದ್ದೆನಿಸಿತು. ಪರಿಣಾಮವಾಗಿ ಕಿಟೆಲ್ಲರ ಜೊತೆಗೆ ಕನ್ನಡಕ್ಕೂ ಮನ್ನಣೆ ದೊರಕಿತಲ್ಲವೆ.

ಈ ಹಿನ್ನೆಲೆಯಲ್ಲಿ ಕಿಟೆಲ್ಲರ ಜೀವನ ಸಾಧನೆಯನ್ನು ವಿವೇಚಿಸ ಬಯಸಿದೆ. ಇವರಿಗೆ ಹಿರಿಯಣ್ಣನಂತಿದ್ದ ಅದೇ ಬಾಸೆಲ್ ಮಿಶನ್ನಿನ ಮೊಗ್ಲಿಂಗ್ ಕನ್ನಡ ಪತ್ರಿಕೋದ್ಯಮ, ಗಾದೆಗಳ ಸಂಗ್ರಹ, ಪತ್ರ ಸಾಹಿತ್ಯ, ಕನ್ನಡ ಲಿಪಿ ಸುಧಾರಣೆ, ಯಕ್ಷಗಾನ, ಹರಿದಾಸ ಸಾಹಿತ್ಯ – ಇವುಗಳನ್ನು ಮೊದಲ ಬಾರಿಗೆ ಕನ್ನಡದಲ್ಲಿ ಪ್ರಕಟಿಸಿದ್ದರು. ಅದೇ ನಿಟ್ಟಿನಲ್ಲಿ ಕಿಟೆಲ್ ಮುಂದುವರಿದು, 'ಪ್ರಥಮ ಬಾರಿಗೆ' ಎಂಬುದನ್ನು ಸಾರ್ಥಕಗೊಳಿಸುವಂತೆ ಹಳಗನ್ನಡ ಕಾವ್ಯ ಸಂಪಾದನೆ, ಖಂಡಕಾವ್ಯ ರಚನೆ, ಕನ್ನಡ ವ್ಯಾಕರಣ, ಛಂದಸ್ಸುಗಳ ವಿವೇಚನೆ ಮುಂತಾದ್ದನ್ನು ಕೈಗೊಂಡು ಆ ಮುಂದಿನವರಿಗೆ, ಮತ್ತು ಇಂದಿನವರಿಗೆ ಮಾರ್ಗದರ್ಶಿಯಾಗಿ ವಿಜೃಂಭಿಸಿದ್ದಾರೆ. ಅವರೀ ಕಾರ್ಯದಲ್ಲಿ ಮತದೃಷ್ಟಿಯ ನೀತಿಮತ್ತೆ ಅಲ್ಲಲ್ಲಿ ತೋರಿ ಬಂದಿದೆಯಾದರೂ ಅದು ನಗಣ್ಯವೆಂದೇ ಭಾವಿಸತಕ್ಕದ್ದು.

ಡಾ. ಕಿಟೆಲ್ ಕುರಿತ ನನ್ನ ವ್ಯಾಸಂಗ ಮೂರು ದಶಕಗಳಷ್ಟು ಹಿಂದಿನದು. ಸಂಶೋಧನ ದೃಷ್ಟಿಯ ಲೇಖನ, ಉಪನ್ಯಾಸಾದಿ ಕೊಟ್ಟಿದ್ದಾಗಿದೆ. ಈಗ ಅವರನ್ನು ವಿದ್ಯಾವಂತ ಓದುಗರಿಗಾಗಿ ಪರಿಚಯಿಸುವ ಅವಕಾಶ ಒದಗಿದ್ದಕ್ಕಾಗಿ ಸಂತೋಷ ಪಡುವೆ.

೩೬, ವಿನಾಯಕ ಲೇಔಟ್
ವಿಜಯನಗರ, ಬೆಂಗಳೂರು–೪೦
(ಫೋನ್ : ೩೩೮ ೪೫೭೯)

ಶ್ರೀನಿವಾಸ ಹಾವನೂರ

ಫರ್ಡಿನಾಂಡ್ ಕಿಟೆಲ್

ಕಿಟೆಲ್, ಕ್ರಿಸ್ತ, ಕನ್ನಡ ಮತ್ತು ಕೋಶ - ಇವು ನಾಲ್ಕೂ 'ಕ' ಕಾರದ ಶಬ್ದಗಳು. ಶಾಬ್ದಿಕವಾಗಿ ಅಲ್ಲದೆ, ಪರಸ್ಪರ ಸಂಬಂಧದಲ್ಲಿಯೂ ಅವುಗಳಲ್ಲಿ ಅನ್ಯೋನ್ಯತೆ ಇದೆ. ಕಿಟೆಲ್ ಕ್ರಿಸ್ತನ ಸಂದೇಶವನ್ನು ಸಾರುವುದಕ್ಕೆಂದು ಕರ್ನಾಟಕಕ್ಕೆ ಬಂದರು, ಕನ್ನಡವನ್ನು ಆಳವಾಗಿ ಅಭ್ಯಸಿಸಿ ಗ್ರಂಥ ಸಂಪಾದನೆ ಮಾಡಿದರು. ಅದಕ್ಕೆ ಮಕುಟವಿಟ್ಟಂತೆ ಕನ್ನಡ ಕೋಶವನ್ನು ರಚಿಸಿದರು. ರೆವರೆಂಡ್ ಆಗಿ ಇಲ್ಲಿಗೆ ಬಂದು ಕನ್ನಡ ವಿಷಯಕವಾದ ಡಾಕ್ಟರೇಟನ್ನೂ ಪಡೆದರು. ಅವರದು ಅನನ್ವಿತ ವ್ಯಕ್ತಿತ್ವದ, ಮೌಲಿಕ ಕಾರ್ಯದ ಜೀವನ ಸಾಧನೆ.

ಜೀವನ ಪಟ

ಉತ್ತರ ಜರ್ಮನಿಯ ರೆಸ್ಟರ್‌ಹಾಫ್ ಎಂಬಲ್ಲಿ ದಿನಾಂಕ ೭ ಎಪ್ರಿಲ್ ೧೮೩೨ ರಂದು ಜನನ. ತಂದೆ ಗಾಟ್‌ಫ್ರೀ ಕಿಟೆಲ್; ತಾಯಿ ಹೆಲೆನ್. ಮಗುವಿಗೆ ಫರ್ಡಿನಾಂಡ್ ಎಂದು ನಾಮಕರಣ ಮಾಡಿದರು. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಅವನು ನೆರೆಯ ಊರಾದ ಔರಿಕ್ ಎಂಬಲ್ಲಿ - ಅಜ್ಜನಿರುವ ಕಾರಣದಿಂದ - ಶಿಕ್ಷಣವನ್ನು ಮುಂದುವರಿಸಿದನು.

ಅಲ್ಲಿಯ ಶಾಲೆಯಲ್ಲಿ ಅವನ ಕೆಲವು ಸ್ವಭಾವ ವಿಶೇಷತೆಗಳು ವ್ಯಕ್ತವಾದುವು. ಆತ ಶಾಂತಸ್ವಭಾವದವ; ತುಸು ಸಂಕೋಚ ಪ್ರವೃತ್ತಿಯವನೂ ಹೌದು. ಮಿತಭಾಷಿ; ವ್ಯರ್ಥವಾದ ಮಾತಿಗೆ ತೊಡಗುತ್ತಿದ್ದಿಲ್ಲ. ಮೋಜಿನ ಐಷಾರಾಮದ ವೃತ್ತಿ ಅವನಿಗೆ ಸೇರದು.

ಆದರೆ ಅವನದು ಕುಶಾಗ್ರ ಬುದ್ಧಿ. ಹಿಬ್ರೂ, ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಬಲು ಬೇಗ ಪ್ರವೀಣನಾದ. ಅವನ ವಿದ್ಯಾಪ್ರಗತಿ "never less than good" ಎಂಬ ಹೊಗಳಿಕೆಗೆ ಪಾತ್ರವಾಗಿತ್ತು. ಇನ್ನೊಂದು ವಿಶೇಷವೆಂದರೆ ಆ ಎಳವರೆಯದಲ್ಲಿಯೇ ಅವನಲ್ಲಿ ದೈವಭಕ್ತಿ ನೆಲೆಗೊಂಡಿತ್ತು. ಬೈಬಲನ್ನು ಪಠಣ ಮಾಡುವುದು, ಕ್ರಿಸ್ತನ ಜೀವನವನ್ನು ಮೆಲುಕು ಹಾಕುವುದು ಅವನ ಮನಸ್ಸಿಗೆ ನೆಮ್ಮದಿಯನ್ನು ಕೊಡುವಂಥದ್ದಾಗಿತ್ತು. ಆ ಭಾವನಿರ್ಭರತೆಯಲ್ಲಿ ಕೆಲವು ಸ್ತೋತ್ರಗಳನ್ನೂ ರಚಿಸಿದ್ದನು.

ಫರ್ಡಿನಾಂಡನಿಗೆ ಈಗ ೧೭ ವರುಷ. ಇನ್ನೂ ಮೂರು - ನಾಲ್ಕು ವರ್ಷ ಕಲಿಯಬೇಕಿತ್ತು. ಅದನ್ನು ನಿಲ್ಲಿಸಿ ಮಿಶನರಿ ತರಬೇತಿ ಹೊಂದಬೇಕೆಂದು ಆಶಿಸಿದ. ಶಾಲೆಯ ಮುಖ್ಯಸ್ಥರಿಗೆ ಇವನ ವಿಚಾರ ತಿಳಿದು ಅಚ್ಚರಿಪಟ್ಟರು. ಬುದ್ಧಿವಂತ ಹಾಗೂ ಸುಸ್ವಭಾವದ ವಿದ್ಯಾರ್ಥಿಯಾಗಿದ್ದ ಅವನನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ವಿವರಣೆ ಕೇಳಿದ ಮೇಲೆ ಅವನ ಧಾರ್ಮಿಕ ಶ್ರದ್ಧೆಯ ಆಳವನ್ನು ಅರಿತರು. ಅವನಿಗೆ ಅನುಮತಿ ಕೊಡುವ ತಮ್ಮ ಶಿಫಾರಸಿನಲ್ಲಿ ಹೀಗೆ ಹೇಳಿದರು.

His interest in religion is not merely a theoretical one. Rather he understood it basically as a condition of life. A convinced piety is the principal feature of his character. He is mentally and physically fit for his self-chosen profession.

ಮಿಶನರಿ ತರಬೇತಿಗಾಗಿ ಫರ್ಡಿನಾಂಡ್ ಬಾಸೆಲ್‌ಗೆ ಹೋದ. ಆದರೆ ಸುಲಭವಾಗಿ ಪ್ರವೇಶ ಸಿಗುವುದೆಂತು? ಅವನ ಶಾಲಾ ಶಿಕ್ಷಣ ಮುಗಿದಿರಲಿಲ್ಲ, ಹದಿನೆಂಟು ತುಂಬಿರಲಿಲ್ಲ. ತನ್ನ ಮನವಿಯಲ್ಲಿ ಕಿಟೆಲ್ ಹೀಗೆ ನಿವೇದಿಸಿದ್ದ:

"ಶಾಲೆಯಲ್ಲಿ ಇಷ್ಟರ ವರೆಗೆ ನಾನು ಕಲಿತಿದ್ದರೂ ಅದೇಕೋ ನೆಮ್ಮದಿ ಎನಿಸಿಲ್ಲ. ಐಹಿಕ ಸುಖ ಸಾಧನಗಳು ಸೇರುತ್ತವೆಂಬುದು ನಿಜ. ಆದರೆ ಆಮೇಲೆ ಜಿಗುಪ್ಸೆ ಬಂದುಬಿಡುತ್ತದೆ. ನಿಮ್ಮ ಸಂಸ್ಥೆಯಲ್ಲಿ ತರಬೇತಿ ಹೊಂದಿದ ಮೇಲೆಯೂ ನಾನೊಬ್ಬ ಉತ್ತಮ ಮಿಶನರಿ ಆದೇನು -

ಎಂಬ ವಿಶ್ವಾಸವೂ ನನಗಿಲ್ಲ. ಏನೇ ಆಗಲಿ, ಆ ಮಾರ್ಗ ಹಿಡಿದ ಅನಂತರವಾದರೂ ಸಮೃದ್ಧಿ ಸಿಕ್ಕೀತು."

ಕಿಟೆಲ್‌ನ ಈ ಪ್ರಾಮಾಣಿಕ ನಿಲುಮೆ ಆಯ್ಕೆ ಸಮಿತಿಯವರಿಗೆ ಚೆನ್ನಾಗಿ ವೇದ್ಯವಾಯಿತು. ಆ ಸಮಿತಿಯ ಅಧ್ಯಕ್ಷರು ಆ ದಿನದ ಸಭೆಯಲ್ಲಿ ಇಲ್ಲದಾಗಲೂ, ಅವರನ್ನು ಆಯ್ಕೆ ಮಾಡಿದರು.

ಮೂರು ವರ್ಷದ ಸರ್ವಾಂಗೀಣವೆನ್ನಬಹುದಾದ ಆ ಮತಶಿಕ್ಷಣ ಮುಗಿದ ಮೇಲೆ ಕಿಟೆಲ್ ೧೮೫೩ರ ಕೊನೆಯಲ್ಲಿ ಕನ್ನಡ ನಾಡಿಗೆ ಬಂದರು. ಮಂಗಳೂರು, ಧಾರವಾಡ, ಮಡಿಕೇರಿ ಮುಂತಾದ ಊರುಗಳಲ್ಲಿ ಕಾರ್ಯ ನಿರ್ವಹಿಸತೊಡಗಿದರು. ಕ್ರಿ.ಶ. ೧೮೬೦ರಲ್ಲಿ ಪಾಲಿನ್ ಎಂಬವಳೊಡನೆ ಮದುವೆಯಾಯಿತು. ಆದರೆ ಕೆಲ ವರ್ಷಗಳಲ್ಲಿಯೆ ಆಕೆ ತೀರಿಕೊಂಡಳು. ಆಮೇಲೆ ಅವಳ ತಂಗಿ ಜ್ಯೂಲಿಯನ್ನು ಮದುವೆಯಾದರು. ಮಕ್ಕಳಾಗಿ, ಕುಟುಂಬ ಬೆಳೆಯಿತು.

ಕಿಟೆಲ್ ಇಲ್ಲಿಗೆ ಬರುವ ಇಪ್ಪತ್ತು ವರ್ಷಗಳಿಗೆ ಮುಂಚೆ (೧೮೩೪) ಬಾಸೆಲ್ ಮಿಶನ್ನಿನವರು ಮಂಗಳೂರಲ್ಲಿ ತಮ್ಮ ಕೇಂದ್ರವನ್ನು ಸ್ಥಾಪಿಸಿದ್ದರು. ಮುಂದೆ ನಾಡಿನ ಉತ್ತರ ಭಾಗಕ್ಕೆ ಆಮೇಲೆ ಕೊಡಗಿಗೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿದ್ದರು. ಆಗಿನ ಅವರ ಮತಪ್ರಸಾರದ ಕಾರ್ಯ ಮೂರು ನಿಟ್ಟಿನಲ್ಲಿ ಸಾಗಿ ಬಂದಿತು. ಒಂದನೆಯದು, ಪ್ರಾಥಮಿಕ ಮಟ್ಟದ್ದು. ಸಂತೆ, ಜಾತ್ರೆಗಳಲ್ಲಿ ಜನ ನೆರೆದಾಗ, ಕ್ಷೇತ್ರ ಸ್ಥಳಗಳಲ್ಲಿ ಉತ್ಸವ ನಡೆದಾಗ ಅಲ್ಲಿಗೆ ಹೋಗಿ, ಕ್ರೈಸ್ತ ಮತದ ಮೇಲ್ಮೆಯನ್ನು ತಮ್ಮದೇ ಆದ ವಿಶಿಷ್ಟ ಕನ್ನಡದಲ್ಲಿ ಸಾರುವುದು.

ಎರಡನೆಯದು, ಬೈಬಲ್ ಮತ್ತು ಇತರ ಮತೀಯ ಕೃತಿಗಳನ್ನು ಕನ್ನಡದಲ್ಲಿ ಅನುವಾದಿಸಿ, ಮುದ್ರಿಸಿ ಪ್ರಕಟಿಸುವುದು.

ಮೂರನೆಯದು, ಶಾಲೆಗಳನ್ನು ಆರಂಭಿಸಿ ಇಂಗ್ಲಿಷ್ ಮುಂತಾದ ಪಾಶ್ಚಾತ್ಯ ಕ್ರಮದ ಶಿಕ್ಷಣ ಕೊಡುವುದು; ಆ ಬೋಧನೆಯಲ್ಲಿ ಸ್ವಮತೀಯ ದೃಷ್ಟಿಕೋನದ ವಿಚಾರಗಳನ್ನು ತರುವುದು.

ಈ ಶಿಕ್ಷಣಕ್ಕಾಗಿ ಪಠ್ಯ ಪುಸ್ತಕಗಳು ಬೇಕಲ್ಲವೆ? ಅದನ್ನು ಸಿದ್ಧಪಡಿಸುವ ಕೆಲಸವೂ ಮಿಶನ್ನಿನವರದೇ ಆಗಿದ್ದಿತು. ಅವುಗಳ ಉತ್ತಮಿಕೆಯನ್ನು ಗಮನಿಸಿ ಆಗಿನ ಮದ್ರಾಸ ಸರಕಾರವು ಇವರ ಹಲವಾರು ಪಠ್ಯಪುಸ್ತಕಗಳನ್ನು ಅಂಗೀಕರಿಸಿ ಬಳಸತೊಡಗಿತು. ಕನ್ನಡ ಪುಸ್ತಕೋದ್ಯಮದ ಮೊದಲ ಹಂತ ಎಂದು ಇದಕ್ಕೆ ಹೇಳಲಡ್ಡಿಯಿಲ್ಲ.

ಕಿಟೆಲ್ಲರಿಗೆ ಮುಂಚೆ, ಮೇಲೆ ಹೇಳಿದ ರೀತಿಯಲ್ಲಿ ಹಲವಾರು ಜನ ಬಾಸೆಲ್‌ದಿಂದ ಬಂದ ಮಿಶನರಿಗಳು ಕಾರ್ಯನಿರತರಾಗಿದ್ದರು. ಐವತ್ತಕ್ಕೂ ಮೇಲ್ಪಟ್ಟು ಶಾಲೆಗಳು ಸ್ಥಾಪಿತವಾಗಿದ್ದುವು. ಪುಸ್ತಕ ಪ್ರಕಟಣೆ ಮಾತ್ರ ವ್ಯವಸ್ಥಿತವಾಗಿ ರೂಪುಗೊಂಡಿರಲಿಲ್ಲ. ಈ ಕಾರ್ಯದಲ್ಲಿ ಆ ಕಾಲಕ್ಕೆ ತೊಡಗಿದವರೆಂದು ಮೊಗ್ಲಿಂಗ್, ವೈಗ್ಲೆ, ವುರ್ತ್, ಮೆನರ್ (ತುಳುವಿನಲ್ಲಿ) ಇವರನ್ನು ಹೆಸರಿಸಬೇಕು. ಅದರಲ್ಲಿಯೂ ಮೊಗ್ಲಿಂಗ್ ಕಿಟೆಲ್‌ರಿಗೆ ಹಿರಿಯಣ್ಣನಂತಿದ್ದು ಮಿಶನ್ನಿನ ಸಾಹಿತ್ಯಕ ಕಾರ್ಯಕ್ಕೆ ಅಡಿಪಾಯ ಹಾಕಿದ್ದರು. ಕಿಟೆಲ್ ಅದರ ಮೇಲೆ ವಿದ್ವತ್ತಿನ ಸೌಧವನ್ನೇ ನಿರ್ಮಿಸಿದರೆನ್ನಬೇಕು.

ಕಿಟೆಲ್ ಮಂಗಳೂರಿನಲ್ಲಿ ಕೆಲ ಕಾಲ ಕಳೆದ ಮೇಲೆ ಅವರನ್ನು ಧಾರವಾಡಕ್ಕೆ ಶಾಲಾ ಶಿಕ್ಷಣದ ಕಾರ್ಯಕ್ಕಾಗಿ ಕಳಿಸಲಾಯಿತು. ಅವರು ವಿವರವಾಗಿ ಕನ್ನಡ ಕಲಿತದ್ದು ಅಲ್ಲಿಯೇ. ಪುನಹ ಮಂಗಳೂರಿಗೆ ಬಂದಾಗ ಅಲ್ಲಿಯ ಮಿಷನರಿಯಲ್ಲಿ ದೈವಜ್ಞಾನದ (theology) ಶಿಕ್ಷಕರಾಗಿ ಅನುಪಮ ಸೇವೆ ಸಲ್ಲಿಸಿದರು. ಕನ್ನಡದಲ್ಲಿ ಪ್ರೌಢಿಮೆಯನ್ನು ಪಡೆದದ್ದು ಈ ಕಾಲದಲ್ಲಿಯೇ. ಪಠ್ಯಪುಸ್ತಕ, ಹಾಗೂ ಮತೀಯ ಕೃತಿರಚನೆಗೆ ಉದ್ಯುಕ್ತರಾದರು.

ಕ್ರಿ.ಶ. ೧೮೭೨ನೆಯ ಇಸವಿ ಅವರ ಜೀವನದಲ್ಲಿ ವಿಶೇಷ ಮಹತ್ವದ್ದು. ಹಳಗನ್ನಡ ಕಾವ್ಯ ಸಂಪಾದನೆ ಆ ವರ್ಷದಿಂದ ಮೊದಲಾಯಿತು. ಮತ್ತು ಅದೇ ಸ್ಥಾಪಿತವಾದ Indian Antiquary (I.A) ಯಲ್ಲಿ ಟಿಪ್ಪಣಿ

ರೂಪದ, ಆ ಮುಂದೆ Indian Evangelical Review ದಲ್ಲಿಯೂ (I.E.R.) ಅಭ್ಯಾಸಪೂರ್ಣ ಲೇಖಗಳನ್ನು ಬರೆಯ ತೊಡಗಿದರು ಭಾರತೀಯ ತತ್ವಜ್ಞಾನಕ್ಕೆ ಸಂಬಂಧಿಸಿದ ಕೃತಿಗಳನ್ನು ಜರ್ಮನ್ ಭಾಷೆಯಲ್ಲಿಯೂ ರಚಿಸಿದರು.

ಈ ವೇಳೆಗೆ (ಸು. ೧೮೭೭) ಕನ್ನಡ ನಿಘಂಟುವಿನ ರಚನೆಯ ಸೂಚನೆಯು ಮುಂಬಂದಿತು. ಆ ಮುಂದಿನ ೧೫ ವರ್ಷಗಳ ಕಾಲ ಅದೇ ಕೆಲಸ. ಅದರಲ್ಲಿ ಅವರ ಕಣ್ಣಿನ ನರಗಳು ದುರ್ಬಲಗೊಂಡಿದ್ದುವು. ಅಂಥದರಲ್ಲೇ ಆ ಬೃಹತ್ ಕೋಶದ ಹಸ್ತಪ್ರತಿ ಸಿದ್ಧವಾಯಿತು. ಮುದ್ರಣ ಕಾರ್ಯ ಮಂಗಳೂರಲ್ಲಿ ನಡೆದಿರುತ್ತ ಅವರು ಸ್ವದೇಶಕ್ಕೆ ಹಿಂತಿರುಗಿದ್ದರು. ಅಲ್ಲಿ ಇದ್ದುಕೊಂಡೇ ಕರಡಚ್ಚನ್ನು ತಿದ್ದುವ ಕೆಲಸ. ಅಂತೂ ೧೮೯೪ರಲ್ಲಿ ಕನ್ನಡ ಇಂಗ್ಲಿಷ್, ಕೋಶವು ಹೊರಬಂದಿತು. ಆ ಕೂಡಲೇ ಪ್ರಶಂಸೆಯ ಸುರಿಮಳೆ. ಜರ್ಮನಿಯ ಟ್ಯುಬಿಂಗೆನ್ ವಿಶ್ವವಿದ್ಯಾಲಯವು ಅವರಿಗೆ ಡಾಕ್ಟರೇಟ್ ಪದವಿಯಿತ್ತು ಗೌರವಿಸಿತು (೧೮೯೬). ಕನ್ನಡದ ಕೆಲಸಕ್ಕಾಗಿ ವಿದೇಶದಲ್ಲಿ ದೊರೆತ ಗೌರವ ಇದು.

ಸ್ವಗ್ರಾಮಕ್ಕೆ ಹಿಂತಿರುಗಿದಾಗಲೂ ಕಿಟೆಲ್ಲರ ಗ್ರಂಥರಚನೆ ಸಾಗಿಯೇ ಇದ್ದಿತು. ಕನ್ನಡ ಬೈಬಲಿನ ಭಾಷಾ ಸುಧಾರಣೆಯಲ್ಲಿ ಪಾಲ್ಗೊಂಡಿದ್ದರು. ಅವರ ತೀರ ಕೊನೆಗಾಲದ ಕೃತಿ ಕನ್ನಡದ ಪ್ರೌಢ ವ್ಯಾಕರಣವಾಗಿದ್ದಿತು. ಅದರ ಮುದ್ರಿತ ಪ್ರತಿಯನ್ನು ನೋಡಿದ ಧನ್ಯತೆಯಲ್ಲಿ ಅವರು ಅಸು ನೀಗಿದರು.

ಜೀವನ ಸಾಧನೆ

ಪ್ರತಿಯೊಬ್ಬರ ಸಾಧನೆಯಲ್ಲಿ ಮುನ್ನಡೆಸುವ ಕೆಲವು ಪ್ರೇರಕ ಶಕ್ತಿಗಳಿರುತ್ತವೆ. ಕಿಟೆಲ್ಲರ ಜೀವದಲ್ಲಿ ಅತ್ಯಂತಿಕ ಧರ್ಮನಿಷ್ಠೆ ಹಾಗೂ ಆಳವಾದ ಭಾಷಾಸಕ್ತಿ - ಇವೆರಡನ್ನು ಪ್ರೇರಕ ಶಕ್ತಿಗಳೆಂದು ಹೇಳಬಹುದು.

ಧಾರ್ಮಿಕ ನಿಷ್ಠೆ ಎನ್ನುವುದು ಎಲ್ಲ ಮಿಶನರಿ ಜನರಲ್ಲಿ ಇರಬೇಕಾದ ಅಂಶವೇ. ಕಿಟೆಲ್ ಮನೆತನವೇ ಹಾಗೆ ನಡೆದುಕೊಂಡು ಬಂದಿದ್ದಿತು. ಅವರ ತಂದೆ ಸ್ವಯಂ ಧರ್ಮೋಪದೇಶಕನಿದ್ದನು. ತಾನು ಮಿಶನರಿಯಾಗಬೇಕೆನ್ನುವ ಬಯಕೆಯ ಹಿನ್ನೆಲೆಯನ್ನು ಅವರು ಹೀಗೆ ಹೇಳಿದ್ದಾರೆ:

I attempt achieving sanctification by my own strength. Where otherwise shall I seek refuse than in Christ ? Last year, we studied the Acts of Apostles. I felt so much pity with those who served dead idols that I wanted to see them saved in Christ. I am not conscious of any other motives but the love of Christ.

ಧಾರ್ಮಿಕ ನಿಷ್ಠೆಗೆ ಎರಡು ಮುಖಗಳು: ಒಂದು ಭಾವನಾತ್ಮಕ, ಇನ್ನೊಂದು ವೈಚಾರಿಕ. ಕಿಟೆಲ್ ಯೇಸುವಿನ ಜೀವನವನ್ನು ಕಾವ್ಯ ರೂಪದಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಇದು ಭಾವನಾತ್ಮಕವಾದರೆ, ಕ್ರೈಸ್ತ ಮತಕ್ಕೆ ಸಂಬಂಧಿಸಿದ ಚರಿತ್ರೆ ಮುಂತಾದ್ದರ ಅವರ ಬರಹ ಕಾರ್ಯವನ್ನು ವೈಚಾರಿಕ ಸದರಿನಲ್ಲಿ ಸೇರಿಸಬಹುದು. ಇದೇ ಧಾರ್ಮಿಕ ಮನೋಭಾವದಿಂದ ಕಿಟೆಲ್ ಭಾರತೀಯ ತತ್ವಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿದರು. ಅದೆಲ್ಲಕ್ಕೆ ಕ್ರೈಸ್ತ ಪ್ರಣಾಲಿಯೇ ಪ್ರೇರಣೆ ಒದಗಿಸಿರಲು ಸಾಕು. ಮತ್ತಲ್ಲದೆ, ಈ ಶ್ರದ್ಧೆಯು ಅತಿರೇಕವನ್ನು ತಲುಪಿದ್ದರ ಪರಿಣಾಮವಾಗಿ ಕಡು ನೀತಿಮತ್ತೆಯು ಅವರಲ್ಲಿ ನೆಲೆಗೊಂಡಿದ್ದಿತು. ಈ ಬಗೆಯ Puritanism ಹತ್ತೊಂಬತ್ತನೆಯ ಶತಮಾನದ ಪಾಶ್ಚಿಮಾತ್ಯರನೇಕರಲ್ಲಿ ವ್ಯಕ್ತವಾದದ್ದೇ. ಜೊತೆಗೆ ಕಿಟೆಲ್‌ರಲ್ಲಿ ಹಿಂದೂಧರ್ಮದ ಬಗ್ಗೆ ಕಿಂಚಿತ್ ಅಸಹನೆಯೂ ಮೂಡುವುದಕ್ಕೆ ಕಾರಣವಾಯ್ತು. ಇರಲಿ.

ಭಾಷಾಸಕ್ತಿ

ಯಾವುದೇ ಭಾಷೆ ಹಾಗೂ ಅದರ ಶಬ್ದ ಪ್ರಪಂಚ - ಈ ನಿಟ್ಟಿನಲ್ಲಿ ಕಿಟೆಲ್‌ರಿಗೆ ಒಂದು ಬಗೆಯ ವಿಶೇಷ ಆಕರ್ಷಣೆ ಇದ್ದಿತು. ಅವರು ಅನೇಕ ಹಳಗನ್ನಡ ಕಾವ್ಯಗಳನ್ನು ಹಸ್ತ ಪ್ರತಿಯ ರೂಪದಲ್ಲಿ

ಓದಿದ್ದರೂ ಅಲ್ಲಿಯ ಕಾವ್ಯ ಸೌಂದರ್ಯಕ್ಕಿಂತ ಅವುಗಳಲ್ಲಿಯ ಶಬ್ದ ಸಂಪತ್ತು, ಭಾಷಾಶುದ್ಧತೆಯ ಕಡೆಗೇ ಹೆಚ್ಚಾಗಿ ಗಮನವಿರುತ್ತಿತ್ತು. ಮುಂದೆ ಅವನ್ನು ಸಂಪಾದಿಸಿ ಪ್ರಕಟಿಸುವಾಗಲೂ, ಪಠ್ಯಪುಸ್ತಕಗಳನ್ನು ರಚಿಸುವಾಗಲೂ ಈ ಮನೋಭಾವವೇ ಅವರಲ್ಲಿ ಒಡೆದು ತೋರುವಂತಿದೆ.

ಅದಕ್ಕೂ ಮುಂದುವರಿದು ಹೇಳುವುದಾದರೆ, ಶಬ್ದಾಂತರ್ಗತ ಭಾಷೆಯ ಮೂಲಕವೇ ಧರ್ಮ ಸಾಧನೆಯಾಗಬೇಕಲ್ಲವೆ. ಆದ್ದರಿಂದ ಶಬ್ದ ವಿಚಾರವೂ ಕ್ರೈಸ್ತ ಧರ್ಮಕ್ಕೆ ಪರೋಕ್ಷವಾಗಿ ಸಂಬಂಧಿಸಿದ್ದೇ ಎಂಬುದಾಗಿ ಮಿಶನರಿಗಳು ಭಾವಿಸಿರಬೇಕು. ಮರಾಠೀ - ಇಂಗ್ಲಿಷ್ ಕೋಶದ ಕರ್ತೃ ಮೋಲ್ಸ್‌ವರ್ತ್ ಇದೇ ನಿಲುವನ್ನು ತೋರ್ಪಡಿಸಿದ್ದಾನೆ.

It (the Dictionary) was undertaken not from a thirst after honour or emolument, but from an humble desire of promoting the propagation of the glorious Gospel; and it was continued by the energy of this desire, through sickness and weakness and against troubles and difficulties and grievous discouragement.

ಕಿಟೆಲ್ಲರಲ್ಲಿ ಭಾಷಾಸಕ್ತಿಯೆಂಬುದು ರಕ್ತಗತವಾಗಿತ್ತು. ಹೀಗಾಗಿ ಕನ್ನಡ ನುಡಿ ಮತ್ತು ಕನ್ನಡ ಶಬ್ದಭಂಡಾರ ಅವರ ಚಿಂತನೆಯನ್ನು, ಆಜೀವ ಆವರಿಸಿಕೊಂಡಿತ್ತು. ಅಂತೂ ಈ ವಿಷಯವನ್ನು ಆಳವಾಗಿ ಅಭ್ಯಸಿಸಿದರು.

ಈ ವಿಚಾರದಲ್ಲಿ ಕನ್ನಡದ ಪ್ರೌಢ ವೈಯಾರಕರಣಿ ಕೇಶಿರಾಜನೇ (೧೩ನೆಯ ಶತಮಾನದವ) ಅವರ ಕನ್ನಡ ಪ್ರೊಫೆಸರ್! ತಾನು ಬರೆದದ್ದು ವ್ಯಾಕರಣ ಗ್ರಂಥವಾದರೂ ಅದನ್ನು ಶಬ್ದಮಣಿದರ್ಪಣ' ಎಂದು ಕರೆದು 'ಶಬ್ದ' ಭಂಡಾರದ ಮಹತ್ವವನ್ನು ಕಿಟೆಲ್ಲರಿಗೆ ಮನಗಾಣಿಸಿಕೊಟ್ಟವ - ಈ ಕೇಶಿರಾಜ. ಶಬ್ದಗಳ ಅರ್ಥವನ್ನು ಇಡಿಯಾಗಿ, ಸರಿಯಾಗಿ ಗ್ರಹಿಸುವುದು ಅವಶ್ಯವೆಂದು ಕಿಟೆಲ್ ಮನಗಂಡಿದ್ದರು. ಕನ್ನಡ ಕಾವ್ಯಗಳ ಪ್ರತಿಕಾರರು

ಎಂತೆಂತಹ ತಪ್ಪು ಮಾಡುತ್ತಿದ್ದರೆಂಬುದು ತಿಳಿದ ವಿಷಯ. ಕಿಟೆಲ್ಲರಿಗೆ ಅದೊಂದು ಅಸಹನೀಯ ಸಂಗತಿಯಾಗಿತ್ತು. ಹೀಗಾಗಿ ಒಂದು ಕಾವ್ಯದ ಹಲವಾರು ಹಸ್ತಪ್ರತಿಗಳನ್ನು ಅವರು ಅರಸುತ್ತಿದ್ದರು. ಉದ್ದೇಶ-ಸರಿಯಾಗಿ ಅರ್ಥಕೊಡುವ ಪದವನ್ನು ಕಂಡು ಹಿಡಿಯುವುದಾಗಿದ್ದಿತು. ಇಷ್ಟು ಮಾತ್ರವಲ್ಲ, ಮುದ್ರಣಕ್ಕೆ ಕೊಡುವ ಮುಂಚೆ ತಾವೇ ಪ್ರತಿ ಮಾಡಿ ಇಟ್ಟುಕೊಳ್ಳುತ್ತಿದ್ದರು. ಗ್ರಂಥ ಸಂಪಾದನಾ ಶಾಸ್ತ್ರದ ಈ ಮೊದಲ ಹೆಜ್ಜೆಯನ್ನು ರೂಢಿಸಿದವರು ಕಿಟೆಲ್ಲರು. ತಮ್ಮ ನಿಲುಮೆಯನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ.

Last year, when searching after Canerese manuscripts in the Raja's library at Maisur, I happened to meet with Mangaraj Nighantu, I had never seen such a work before and anxious to get a copy. I took the mss. with me to Mercara where I copied it, as it was with its thousand mistakes.

ಗ್ರಂಥರಚನಾ ಕಾರ್ಯ

ಈ ಹಿನ್ನೆಲೆಯಲ್ಲಿ ಕಿಟೆಲ್ಲರ ಗ್ರಂಥರಚನೆಯನ್ನು ವಿವರವಾಗಿ ಪರಿಶೀಲಿಸೋಣ. ಅದು ಈ ಕೆಳಗಿನ ವಿವಿಧ ಪ್ರಕಾರಗಳಲ್ಲಿ ಕಂಡುಬಂದಿದೆ.

- ಶಾಲಾ ಪಠ್ಯಗಳು
- ಹಳಗನ್ನಡ ಕಾವ್ಯ ಸಂಪಾದನೆ
- ಹಿಂದೂ ಧರ್ಮ ವಿವೇಚನೆ
- ಯೇಸು ಕ್ರಿಸ್ತನ ಚರಿತ್ರೆ
- ಕ್ರೈಸ್ತ ಗದ್ಯ ಬರವಣಿಗೆ
- ಕನ್ನಡ - ಇಂಗ್ಲಿಷ್ ಕೋಶ
- ಬೈಬಲ್ ಅನುವಾದ ಟಿಪ್ಪಣಿ, ಮತ್ತು
- ಕನ್ನಡ ವ್ಯಾಕರಣ.

ಒಂದೊಂದಾಗಿ ಪರಿಶೀಲಿಸುವಾ.

ಶಾಲಾ ಪಠ್ಯಗಳು

ಈ ವಿಷಯವಾಗಿ ಮದ್ರಾಸ ಸರಕಾರದ ವಿದ್ಯಾ ಖಾತೆಗೂ ಬಾಸೆಲ್ ಮಿಶನ್ನಿಗೂ ಪರಸ್ಪರ ಹಿತ ಸಂಬಂಧವೇ ಇದ್ದಿತು. ಇತಿಹಾಸ ವಿಷಯಕ ಶಾಲಾ ಪಠ್ಯಗಳು ಇಂಗ್ಲಿಷ್‌ನಲ್ಲಿ ಇದ್ದವುಗಳೇ. ಅವನ್ನು ಕನ್ನಡಕ್ಕೆ ಭಾಷಾಂತರಿಸುವ ವಿಷಯದಲ್ಲಿ ದೇಶೀಯರು ಇದ್ದರಾದರೂ ಮಿಶನರಿಗಳಿಗೆ ಒಪ್ಪಿಸಿದ್ದುದು, ಅವರ ಕೆಲಸದ ಬಗೆಯಲ್ಲಿ ವಿಶ್ವಾಸವಿದ್ದುದೇ ಕಾರಣ. ಅಂತೂ ಕಿಟೆಲ್ಲರು ಎರಡು ಇತಿಹಾಸದ ಪುಸ್ತಕಗಳನ್ನು (ಮಾರಿಸ್ ಕೃತ) ಅನುವಾದಿಸಿ ಕೊಟ್ಟರು. ಆದರೆ, ಕನ್ನಡ ನುಡಿಯ ವಾಚನ ಪುಸ್ತಕಗಳನ್ನು ಸಿದ್ಧಪಡಿಸಿದ್ದರಲ್ಲಿ ಕಿಟೆಲ್ಲರು ಅರ್ಥಪೂರ್ಣವಾಗಿ ಶ್ರಮಿಸಿದ್ದಾರೆ. ಎಂದರೆ ಮಕ್ಕಳ ಜ್ಞಾನಾರ್ಜನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪಾಠಗಳನ್ನು ಸಿದ್ಧಪಡಿಸಿದ್ದಾರೆ.

ಇತ್ತ ಹಳಗನ್ನಡ ಕಾವ್ಯಗಳಿಂದ ಆಯ್ದು 'ಸಂ೧ ಕರ್ನಾಟಕ ಕಾವ್ಯಮಾಲೆ' ಎಂಬುದನ್ನು ಹೊರತಂದಿದ್ದಾರೆ. ಅದರಲ್ಲಿ ಶಬ್ದಾರ್ಥ, ಪ್ರಶ್ನೋತ್ತರಗಳು ಇರುವುದರಿಂದ, ಇದಾದರೂ ಪಠ್ಯವೇ ಆಗಿದ್ದಿರಲು ಸಾಕು. ಈಗಿನಂತೆ ಪಠ್ಯಪುಸ್ತಕ ನಿರ್ಮಾಣವು ವ್ಯವಸ್ಥಿತವಾಗಿ ಇದ್ದಿರದ ಕಾಲದಲ್ಲಿ ಕಿಟೆಲ್ಲರು ಅದಕ್ಕೆ ದಾರಿ ಮಾಡಿಕೊಟ್ಟರೆನ್ನಬೇಕು. ಆ ಮುಂದೆ (೧೮೭೭) ಹೊರಬಂದ 'ಕಾವ್ಯಮಂಜರಿ' ಎನ್ನುವುದು ಮೇಲಿನದರ ಸಂಕ್ಷೇಪವಾಗಿದೆ.

ಕಿಟೆಲ್ ಸಂಪಾದಿಸಿದ, ಕನ್ನಡ ಪಂಚತಂತ್ರವು ವಿಶಿಷ್ಟವಾದುದು. 'ಶಾಲೆಗಳ ಪ್ರಯೋಜನಾರ್ಥಕವಾದದ್ದು' ಎಂಬ ಹಣೆಪಟ್ಟಿ ಇದೆ. ಅದರಲ್ಲಿಯ ಕತೆಗಳು ಶಾಲಾಮಕ್ಕಳ ವಾಚನಕ್ಕೆ ಸೂಕ್ತವಾದದ್ದೇ. ಆದರೆ ಕಿಟೆಲ್ಲರು ಅದಕ್ಕೆ ಬರೆದ, ವಿಸ್ತಾರವಾದ preface ಮಾತ್ರ ಮಗುವಿಗೆ ತೊಡಿಸಿದ ದೊಡ್ಡ ಮುಂಡಾಸಿನಂತಿದೆ! ಕಾರಣವೆಂದರೆ, ಆ ಇಂಗ್ಲಿಷ್ ಪೀಠಿಕೆಯಲ್ಲಿ ಪಂಚತಂತ್ರದ ಕತೆಗಳ ಮೂಲ ಎಲ್ಲಿಯದು? ಅದಕ್ಕೂ ಈಸೋಪನ ನೀತಿಕತೆಗಳಿಗೂ ಏನು ಸಂಬಂಧ? - ಎಂಬುದನ್ನು ವಿವೇಚಿಸಿದ್ದಾರೆ. ಮುಂದುವರಿದು, ಅದರ ರಚನಾ ಕಾಲದ ವಿಷಯವನ್ನು ಎತ್ತಿಕೊಂಡಿದ್ದಾರೆ.

ಮೂಲದಲ್ಲಿಯಂತೂ ಅದರ ಕಾಲದ ಹೊಳಹು ಇಲ್ಲದಾಗ, ಪಾಣಿನಿ ಮುಂತಾದ ಪ್ರಾಚೀನರ ಕಾಲದ ಬಗ್ಗೆ ವಿದ್ವಾಂಸರು ಹೇಳಿದ್ದುದರ ಪರಾಮರ್ಶನ ಮಾಡಿ, ಅದರ ಆಧಾರದ ಮೇಲಿಂದ ಪಂಚತಂತ್ರದ ಕಾಲವನ್ನು ಊಹಿಸಿದ್ದಾರೆ. ಶಾಲಾ ವಿದ್ಯಾರ್ಥಿಗಳಿಗೆ ಇಷ್ಟೆಲ್ಲ ಬೇಕಿತ್ತೆ ?- ಎಂದು ಕೇಳಬೇಡಿರಿ! ಕಿಟೆಲ್ಲರಿಗೇ ಬೇಕಿತ್ತು. ಅಂತೂ ಯಾವುದೊಂದು ವಿಷಯವಿರಲಿ, ಅದರ ಆಳಕ್ಕೆ ಇಳಿಯುವುದು ಕಿಟೆಲ್ಲರ ವಿಶೇಷತೆ - ಎನ್ನೋಣ.

ಪಂಚತಂತ್ರದ ಕತೆಗಳೆಲ್ಲವೂ ಇಲ್ಲಿ ಇಲ್ಲ. ಕೆಲವನ್ನು ಕೈಬಿಟ್ಟಿದ್ದಾರೆ. Tales violating the rules of decency, for which every father of a family and every honest teacher doubtlessly will thank us. ಎಂಬುದಾಗಿ ಹೆಮ್ಮೆ ಪಟ್ಟಿದ್ದಾರೆ. ಮೇಲೆ ಹೇಳಿದ ಅವರ ಕಡು ನೀತಿಮತ್ತೆಯ ಪ್ರಭಾವವಿದು.

ಹಳಗನ್ನಡ ಕಾವ್ಯ ಮತ್ತು ಗ್ರಂಥಸಂಪಾದನೆ

೧. ಕರ್ನಾಟಕ ಕಾವ್ಯಮಾಲೆ : ' ಸಂಣ ಕರ್ನಾಟಕ ಕಾವ್ಯ ಮಾಲೆ' ಯು ಒಂದೆರಡು ಮರುಮುದ್ರಣ ಕಂಡಮೇಲೆ ಅದೊಂದು ಕನ್ನಡ ಕಾವ್ಯದ ಪ್ರೌಢ ಸಂಗ್ರಹವಾಗಿ ಬೆಳೆಯಿತು. (೧೮೭೪). ಸಾಮಾನ್ಯವಾಗಿ ಇಂಥ ಸಂಗ್ರಹಗಳಲ್ಲಿ ಒಬ್ಬೊಬ್ಬ ಕವಿಯ ಕೃತಿಯಿಂದ ಕೆಲ ಭಾಗಗಳನ್ನು ಆಯ್ದುಕೊಡುವ ಕ್ರಮವಿರುತ್ತದೆ. ಆದರೆ ಕಿಟೆಲ್ಲರು ವಿಷಯವಾರ ಅದನ್ನು ಕೊಡಮಾಡಿದ್ದಾರೆ. ಅಂದಾಗ ಒಂದೇ ವಿಷಯಕ್ಕೆ ಬೇರೆ ಬೇರೆ ಕವಿಗಳ ಪದ್ಯಗಳೂ ಬರುತ್ತವೆ. ನಿಜಕ್ಕೂ ಅದೊಂದು ವಿನೂತನ ಕ್ರಮ. ವಿಷಯಗಳೇನು ಗೊತ್ತೆ ? ಭಕ್ತಿ, ಆಸೆ, ದುರ್ಜನಸಂಗ, ವಸಂತಋತು, ಮಾಯೆ, ಸುಕವಿತ್ವಲಕ್ಷಣ - ಮುಂತಾಗಿ ೧೦೩ ವಿಷಯಗಳಿರುವುದು ಕಿಟೆಲ್ಲರ ಸ್ವೋಪಜ್ಞತೆಗೆ ನಿದರ್ಶನವಾಗಿದೆ. ಪ್ರತಿಯೊಂದು ಪದ್ಯಕ್ಕೆ 'ಪರಿಚ್ಛೇದಂ', 'ಅನ್ವಯಂ' ಮತ್ತು 'ಟೀಕು' - ಈ ವಿವರಣೆಗಳಿವೆ. ಶಬ್ದಾರ್ಥ? ಮೊದಲ ಆವೃತ್ತಿಯಲ್ಲಿ ೧೫೫ ಪುಟಗಳದಿದ್ದದ್ದು ಈ ವಿಸ್ತೃತ

ಸಂಗ್ರಹದಲ್ಲಿ ಮೂರು ಪಟ್ಟು ಬೆಳೆದಿದೆ. ಅಷ್ಟು ಮಾತ್ರವಲ್ಲ, ಅಲ್ಲಲ್ಲಿ ಇಂಗ್ಲಿಷ್‌ನಲ್ಲಿ ಅರ್ಥವನ್ನೂ ಕೊಟ್ಟಿದ್ದು ಮತ್ತೊಂದು ವಿಶೇಷತೆಯಾಗಿದೆ.

"to cultivate a taste for good poetry in the reader" ಎಂಬ ತಮ್ಮ ಆಶಯವನ್ನು ಕಿಟೆಲ್ ಇಲ್ಲಿ ವ್ಯಕ್ತ ಪಡಿಸಿದ್ದಾರೆ. ಪಂಚತಂತ್ರ ವಿಚಾರದಲ್ಲಿಯೂ ಅದು ಇತ್ತೆಂಬುದನ್ನು ನೋಡಿದ್ದೇವೆ. ಅದರ ಹಿಂದಿನ ಕಡು ನೀತಿ ಮತ್ತೆಯನ್ನೂ ಗಮನಿಸಿದ್ದೇವೆ. ಇಲ್ಲಿ ಅದು ಇನ್ನೂ ಮುಂದೆ ಹೋಗಿದೆ ! ಇಷ್ಟೇ ಅಲ್ಲ, ಹಿಂದೂ ದೇವತೆಗಳ ಬಗ್ಗೆ ಅವರಿಗಿದ್ದ ಅಸಡ್ಡೆ ವ್ಯಕ್ತವಾಗಿದೆ. ಉದಾ. ಗೆ ಸುಪ್ರಸಿದ್ಧ 'ಸೋಮೇಶ್ವರ ಶತಕ'ದಲ್ಲಿ 'ಹರಹರಾ ಶ್ರೀ ಚೆನ್ನಸೋಮೇಶ್ವರಾ' ಎಂದು ಪ್ರತಿಪದ್ಯದ ಕೊನೆಯಲ್ಲಿ ಬರುತ್ತದಷ್ಟೇ. ಅದನ್ನು ತೊಡೆದು ಹಾಕಿದ್ದಾರೆ. ಮತ್ತೆ ಪಾದ ಪೂರ್ತಿಗಾಗಿ ಏನು ಮಾಡಬೇಕು? 'ನರನೆಲಾ ಕೇಳ್ಳೊಪ್ಪುದೀ ಬುದ್ಧಿಯಾ ' ಎಂದು ಸೇರಿಸಿದ್ದಾರೆ - ಪ್ರತಿಯೊಂದು ಪದ್ಯಾಂತ್ಯಕ್ಕೆ.

೨. ಶಬ್ದಮಣಿದರ್ಪಣ

ಹಳಗನ್ನಡದ ಪ್ರೌಢವೂ ಪ್ರಾಮಾಣ್ಯವೂ ಆದ ವ್ಯಾಕರಣವೆಂದರೆ ಕೇಶಿರಾಜನ ಶಬ್ದಮಣಿದರ್ಪಣವೇ ಸೈ. ೧೮೬೦ರ ದಶಕದಿಂದ ಇಂದಿನ ವರೆಗೆ ಅದನ್ನು ಬೇರೆ ಬೇರೆಯವರು ಸಂಪಾದಿಸಿ ಹೊರತರುತ್ತಲೇ ಇದ್ದಾರೆ. ಕಿಟೆಲ್ಲರಿಗಿಂತ ಕೆಲ ವರ್ಷಗಳ ಹಿಂದೆ ಗ್ಯಾರೆಟ್ ಎಂಬಾತ, ಬೆಂಗಳೂರಿನಿಂದ ಅದನ್ನು ಪ್ರಕಟಿಸಿದ್ದ- ಇದ್ದುದಿದ್ದಂತೆ. ಕಿಟೆಲ್‌ರದು ೧೮೭೨ರಲ್ಲಿ ಬೆಳಕು ಕಂಡಿತು. ಇದರ ಅಂತಿಮ ಪ್ರತಿಯನ್ನು ಸಿದ್ಧಗೊಳಿಸಲು ಕಿಟೆಲ್ಲರು ಒಂದಲ್ಲ ೬ ಹಸ್ತಪ್ರತಿಗಳನ್ನು ಮುಂದಿಸಿರಿಕೊಂಡಿದ್ದರು. ಪ್ರತಿಯೊಂದರಲ್ಲಿಯೂ ಹೊರೆ ಪಾಠಾಂತರಗಳು. ಅವುಗಳಲ್ಲಿ ಸರಿಯಾದದ್ದು, ಯಾವುದು ಎಂಬುದನ್ನು ಸಂಪಾದಕರಾದವರು ಊಹಿಸಬೇಕು. ಶಬ್ದಗಳ ಸರಿಯಾದ ರೂಪವನ್ನು ಗುರುತಿಸುವಲ್ಲಿ ಕಿಟೆಲ್ಲರು ಅಲ್ಲಲ್ಲಿ ಎಡವಿರುವರಾದರೂ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಅಂಥ ಕೆಲಸಕ್ಕೆ

ತೊಡಗಿದ್ದುದು ಗಮನಾರ್ಹ ಸಂಗತಿಯಾಗಿದೆ. 'ಗ್ರಂಥ ಸಂಪಾದನಾ' ಕಾರ್ಯದ ದಿಟ್ಟ ಹೆಜ್ಜೆ ಅದಾಗಿದೆ.

ಅವರ ಸಂಪಾದನ ಕ್ರಮವನ್ನು ಸ್ಥೂಲವಾಗಿ ಹೀಗೆ ಕೊಡಬಹುದು. ಮೊದಲು ಸೂತ್ರ, ಅದರ ಎಡಮಗ್ಗುಲಿಗೆ ಇಂಗ್ಲಿಷ್‌ನಲ್ಲಿ ಅದರ ಸಾರ, ಸೂತ್ರಪಾಠದ ಕೆಳಗೆ ಅನುಕ್ರಮವಾಗಿ ಪದಚ್ಛೇದ, ಅನ್ವಯ, ಟೀಕು ಮತ್ತು ಪ್ರಯೋಗಗಳು. ಅಲ್ಲಲ್ಲಿ ಸೂತ್ರದ ಪಾಠಭೇದಗಳನ್ನೂ ತೋರಿಸಿದ್ದಾರೆ. ಕೆಳಗೆ ವ್ಯಾಕರಣ, ಛಂದಸ್ಸು ಮುಂತಾದವುಗಳಿಗೆ ಸಂಬಂಧಿಸಿದ ವಿಶೇಷಾಂಶಗಳನ್ನು ಕೊಟ್ಟಿದ್ದಾರೆ.

ಮುಂದೆ ದೊರೆತ ಹಸ್ತಪ್ರತಿಯ ಆಧಾರದಿಂದ ಕಿಟೆಲ್ ಸ್ಖಾಲಿತ್ಯಗಳನ್ನು ತಿದ್ದಿ ೧೮೯೭ರಲ್ಲಿ ಎರಡನೆಯ ಆವೃತ್ತಿಯನ್ನು ಪ್ರಕಟಿಸಿದ್ದಾರೆ ಮತ್ತು –

The Editor believes that the present edition fairly represents Kesiraja's original and trusts that all scholars interested in the Kannada language will, therefore, gratefully welcome it. ಎಂಬ ಸದಾಶಯವನ್ನು ವ್ಯಕ್ತಪಡಿಸಿದ್ದಾರೆ.

೩. ಛಂದೋಂಬುಧಿ : ಇದೇ ಮಾದರಿಯಲ್ಲಿ ಸಂಪಾದಿತವಾದ ಇನ್ನೊಂದು ಕೃತಿ, ನಾಗವರ್ಮನಿಂದ ರಚಿತವಾದ 'ಛಂದೋಂಬುಧಿ' ಎಂಬ ಗ್ರಂಥ. ಹೆಸರೇ ಹೇಳುವಂತೆ ಛಂದಶ್ಶಾಸ್ತ್ರಕ್ಕೆ ಸಂಬಂಧಿಸಿದ ಅದ್ವಿತೀಯ ಕೃತಿ ಇದು. ಕನ್ನಡ ಪದ್ಯಗಳ ಮೂಲ ಛಂದಸ್ಸು ಅಂಶಗಣದಿಂದ ನಿರ್ಮಿತವಾದದ್ದು ಎಂಬ ವಿನೂತನ ವಿಷಯ ಇದರಲ್ಲಿದೆ. ಇಂದಿಗೂ ಪ್ರಾಮಾಣ್ಯವಾದ ಗ್ರಂಥ.

ಇಲ್ಲಿಯೂ ಕಿಟೆಲರಿಗೆ ಹಲವಾರು ಹಸ್ತಪ್ರತಿಗಳು ದೊರೆತಿದ್ದುವು. ಅರ್ಥಾತ್ ಅವನ್ನು ಅವರು ದೊರಕಿಸಿಕೊಂಡಿದ್ದರು ಎನ್ನುವಾ. ಪಾಠ ಪರಿಶೀಲನೆಗೆ ಹುಬ್ಬಳ್ಳಿಯಿಂದ ದೊರೆತ ಪ್ರತಿ ಹೆಚ್ಚು ಶುದ್ಧವಾಗಿ ತೋರಿಬಂದದ್ದು ಅವರಿಗೆ ಸಮಾಧಾನ ಕೊಟ್ಟಿದ್ದಿತು. ಆದರೆ ಬೇರೊಂದು

ಸಮಸ್ಯೆ ಕಾಣಿಸಿಕೊಂಡಿತು. ಹಳಗನ್ನಡ ಕವಿಗಳು ಗ್ರಂಥದ ಆರಂಭಕ್ಕೆ ತಮ್ಮ ಇಷ್ಟದೇವತೆಯನ್ನು ಸಾಮಾನ್ಯವಾಗಿ ಸ್ತುತಿಸುತ್ತಾರೆ. ಛಂದೋಂಬುಧಿಯ ನಕಲು ಪ್ರತಿಮಾಡಿದವರೇ ಸ್ವಾತಂತ್ರ್ಯವಹಿಸಿ ತಂತಮ್ಮ ಇಷ್ಟದೈವತವನ್ನು (ಶಿವ, ಅರುಹಂತ ಇತ್ಯಾದಿ) ಪ್ರಾರ್ಥನಾ ಪದ್ಯಕ್ಕೆ ಅಳವಡಿಸಿದ್ದರು. ಕಿಟೆಲ್ ಅಂಥ ಸ್ಥಿತಿಯಲ್ಲಿ ಏನು ಮಾಡಬೇಕು? ಪ್ರಾರ್ಥನಾ ಪದ್ಯವನ್ನೇ ತಮ್ಮ ಆವೃತ್ತಿಯಲ್ಲಿ ಕೈಬಿಟ್ಟರು!

ಯಥಾಪ್ರಕಾರ ಅವರ ಕಡುನೀತಿ ಮತ್ತೆಯು (puritanism) ತನ್ನ ಕೈಚಳಕವನ್ನು ತೋರಿಸಿದೆ. ನಾಗವರ್ಮನು ತನ್ನ ಪತ್ನಿಯನ್ನು ಸಂಬೋಧಿಸಿದಂತೆ ಮಾಡಿ ಛಂದೋವಿವರಗಳನ್ನು ಕೊಟ್ಟಿದ್ದಾನೆ. ಶೃಂಗಾರಪೂರ್ಣವಾದ ಅಂಥ ಸಂಬೋಧನೆಗಳನ್ನು ಕಿಟೆಲ್ ತೊಡೆದು ಹಾಕಿ ಸಾದಾ ಪದಗಳನ್ನು ಬಳಸಿದ್ದಾರೆ. ಅವರ ದೃಷ್ಟಿಯಲ್ಲಿ ತಮ್ಮ ಆವೃತ್ತಿಯು ವಿದ್ಯಾರ್ಥಿಗಳಿಗಾಗಿ ಇದ್ದುದಾಗಿತ್ತು. ಮುಂದೆಲ್ಲ ತೌಲನಿಕ ರೀತ್ಯಾ ಪದ್ಯಪಾಠಗಳಿಗೆ ಪೂರಕ ವಿಷಯಗಳನ್ನು ಸೇರಿಸುತ್ತ ವಿವರಿಸಿದ್ದಾರೆ. ಗ್ರಂಥ ಸಂಪಾದನದ ದೃಷ್ಟಿಯಿಂದ ಛಂದೋಂಬುಧಿಯು ಹೆಚ್ಚು ಶಾಸ್ತ್ರೀಯವಾಗಿದೆ. ಹಸ್ತಪ್ರತಿ ಸಂಗ್ರಹಿಸುವುದು, ಕೂಲಂಕಷವಾಗಿ ಪರಿಶೀಲಿಸುವದು, ಪಾಠಾಂತರಗಳನ್ನು ಗುರುತು ಹಾಕುವುದು, ಹಾಗೆ ಮಾಡಿ ತೋರಿಸಿದ್ದಾರೆ. ಹೀಗೆ ಗ್ರಂಥಸಂಪಾದನ ಕಾರ್ಯದ ಅಡಿಪಾಯ ಹಾಕಿ ಮುಂದಿನವರಿಗೆ ಮಾರ್ಗದರ್ಶಿಯಾದದ್ದು ಕಿಟೆಲ್ಲರ ಬಹು ದೊಡ್ಡ ಸಾಧನೆ.

೪. ಕನ್ನಡ ಸಾಹಿತ್ಯ ಚರಿತ್ರೆ

ಕ್ರಿ. ಶ. ೧೮೭೪ ರ ಹೊತ್ತಿಗೆ ನೂರಕ್ಕೂ ಮೇಲ್ಪಟ್ಟು ಹಳಗನ್ನಡ ಕಾವ್ಯಗಳು - ಹಸ್ತಪ್ರತಿಯ ರೂಪದಲ್ಲೇ ಆಗಲಿ - ಲಭ್ಯವಾಗಿದ್ದವು. ಕಿಟೆಲ್ ಅವನ್ನೆಲ್ಲ ಪರಿಶೀಲಿಸಿ ಕ್ರಿ.ಶ. ೧೦ನೆಯ ಶತಮಾನದಿಂದ ತಮ್ಮ ಕಾಲದ ವರೆಗಿನ ಸಾಹಿತ್ಯಚರಿತ್ರೆಯನ್ನು ರೂಪಿಸಿದ್ದಾರೆ. ಸುಮಾರು ಒಂದು ಸಾವಿರ ವರ್ಷದ ಕನ್ನಡ ಸಾಹಿತ್ಯವನ್ನು ಅದರ ಒಟ್ಟಂದದಲ್ಲಿ ಗ್ರಹಿಸಿ, ಅದರ ಲಕ್ಷಣಗಳನ್ನು ಮೊದಲ ಬಾರಿಗೆ ರೂಪಿಸಿದ್ದು ಸಣ್ಣ

ಕೊಡಿಸವೇನಲ್ಲ. ಈ ಸುದೀರ್ಘ ಚರಿತ್ರೆಯಲ್ಲಿ ಸೂಕ್ತವಾದ ಕಾಲಖಂಡಗಳನ್ನು ಮಾಡಿದ್ದಾರೆ. ತಾವು ಮಾಡಿಕೊಂಡಿರುವ ವಿಭಾಗಗಳಲ್ಲಿ ಉಪವಿಭಾಗಗಳನ್ನೂ ಕಲ್ಪಿಸುವಷ್ಟು ಸೂಕ್ಷ್ಮವಾಗಿ ಆಲೋಚಿಸಿದ್ದಾರೆ:

೧. ೮೦೦-೧೩೦೦ರ ಕಾಲಖಂಡ.

ಕೇಶಿರಾಜ, ನಾಗವರ್ಮ, ರುದ್ರಭಟ್ಟ ಇವರ ಚರಿತ್ರೆ, ಹಾಗೂ ಈ ಕಾಲದ ಕವಿಗಳ ಪಟ್ಟಿ, ಲಕ್ಷಣಗಳು

೨. ೧೩೦೦-೧೮೭೨ರ ಕಾಲ ಖಂಡ

ಅ) ಶೈವ, ವೀರಶೈವ ಕವಿಗಳು, ಆ) ವೈಷ್ಣವ, ವೀರಶೈವರು, ಇ) ೧೯ನೇ ಶತಮಾನದ ಬೆಂಗಳೂರು ಧಾರವಾಡ ಕಡೆಯುವರು.

ಹೀಗೆ ವಿಭಜಿಸುವಾಗ ಜೈನ, ಅನಂತರ ಶೈವ/ವೀರಶೈವ ಆಮೇಲೆ ವೈಷ್ಣವ ಕವಿಗಳ ಪ್ರಾಧಾನ್ಯ, ಯಾವ ಯಾವ ಕಾಲಗಳಲ್ಲಿ ಇದ್ದುದೆಂಬುದನ್ನು ಸ್ಥೂಲವಾಗಿ ಸೂಚಿಸಿದ್ದಾರೆ. ಪೂರ್ಣ ಸಾಮಗ್ರಿಯ ಅಭಾವದಿಂದ ನ್ಯೂನತೆಗಳು ಕಂಡುಬಂದರೂ ಕಾವ್ಯ ಕೃತಿಗಳಲ್ಲಿ ಮತಧರ್ಮದ ಪ್ರಭಾವವನ್ನು ಮೊದಲ ಬಾರಿಗೆ ತೋರಿಸಿದ್ದಾರೆ. ಆಮೇಲೆ ಈಚಿನ ವರೆಗೂ ಹಲವಾರು ಸಾಹಿತ್ಯಚರಿತ್ರಕಾರರು ಕಿಟೆಲ್ಲರ ಈ ಆದ್ಯ ಪ್ರಬಂಧವನ್ನು ಮುಂದಿಟ್ಟುಕೊಂಡೇ ವಿವೇಚನೆ ಮಾಡಿದ್ದಾರೆ. ಬಿ.ಎಂ.ಶ್ರೀ ಅವರು ಒಂದೆಡೆ "ಕಿಟೆಲ್ಲರ ಈ ಪ್ರಬಂಧವೇ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಾಧಿಸುವುದಕ್ಕೆ ಮೊದಲ ಗುದ್ದಲಿ ಪೂಜೆ' ಎಂಬುದಾಗಿ ಮನ್ನಣೆ ಸಲ್ಲಿಸಿದ್ದಾರೆ.

ಇದೇ ವರ್ಷ ಕಿಟೆಲರು 'Old Canerese literature' ಎಂಬ ಲೇಖನವನ್ನು IER ದಲ್ಲಿ ಬರೆದಿದ್ದಾರೆ. ಅದರಲ್ಲಿ ಜೈನ, ಲಿಂಗಾಯತ, ಶೈವ, ವೈಷ್ಣವ ಎಂಬ ಸ್ಥೂಲ ವಿಭಾಗಗಳನ್ನು ಮಾಡಿ, ಒಂದೊಂದರಲ್ಲಿ ಅನುಕ್ರಮವಾಗಿ ಹಳಗನ್ನಡ ಕಾವ್ಯಕೃತಿಗಳ ಪಟ್ಟಿ ಕೊಟ್ಟಿದ್ದಾರೆ. (ಒಟ್ಟಿಗೆ ೪೦). ಸಾಮಗ್ರಿಯ ಅನುಪಲಬ್ಧ ಕಾಲದಲ್ಲಿ ಅವರು ವಿವರಿಸಿದ ಕೆಲ

ಅಂಶಗಳು ಬಾಲಿಶವಾಗಿ ಕಾಣಬಹುದು. ಅದಿರಲಿ, ಆ ಪ್ರಬಂಧದ ಸುರುವಿಗೆ ಕನ್ನಡ ಸಾಹಿತ್ಯ ಬಗ್ಗೆ ದೇಶೀ ಕ್ರಿಸ್ತೀಯರು ಏನು ಮಾಡಬೇಕೆಂದು ಕೊಟ್ಟ ಸೂಚನೆ ಮನೋಜ್ಞವಾಗಿದೆ.

The Canerese - speaking people are much gifted and when they have become the 'Children of light' will no doubt become the authors of works that will be equal to those which have been produced by the Christians of the West. So all that is useful and really beautiful in the writings of their fathers, they will make good use of it in creating a new literature.

೫. ಬಿಡಿ ಬರಹಗಳು

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಿಟೆಲ್ ತಮ್ಮ ಕೆಲವು ಲೇಖನಗಳ ಮೂಲಕ ಹಲವಾರು ಮೌಲಿಕ ವಿಚಾರಗಳನ್ನು ವ್ಯಕ್ತ ಪಡಿಸಿದ್ದಾರೆ. ಸಂಕ್ಷಿಪ್ತವಾಗಿ ನೋಡೋಣ.

Karnataka Vaishanava Dasas - ಎಂಬ ಲೇಖನದಲ್ಲಿ (I.A. 1873), ಅನೇಕ ಹರಿದಾಸರ ಹಾಡುಗಳ ಸಮೀಕ್ಷೆ ಮಾಡಿದ್ದಾರೆ. ಇಲ್ಲಿ ಪುರಂದರ ದಾಸರದೇ ಮೇಲುಗೈ. ಕನಕದಾಸರ ಹಾಡುಗಳಲ್ಲಿ ಜನತೆಯ ಮೌಢ್ಯ, ಪೊಳ್ಳು ನಂಬಿಕೆ ಇವುಗಳ ಖಂಡನೆ ಇರುವುದನ್ನು ಗುರುತಿಸಿದ್ದಾರೆ. ವಿಶೇಷವೆಂದರೆ ವಿಶೇಷ ಬೆಳಕಿಗೆ ಬಾರದ ವರಾಹತಿಮ್ಮಪ್ಪ, ವೆಂಕಟದಾಸ, ಉಡುಪಿ ಕೃಷ್ಣದಾಸ ಇವರುಗಳನ್ನು ಪ್ರಸ್ತಾಪಿಸಿದ್ದಾರೆ. ವಸ್ತುನಿಷ್ಠವಾದ ವಿವೇಚನೆ ಇಲ್ಲಿದೆ. ಕಿಟೆಲರ ಒಂದು ಮಹತ್ವಪೂರ್ಣ ಲೇಖವಿದು. ಆದಾಗ್ಯೂ Regarding the history of the Karnataka Dasas, I know only a little that is certain ಎಂದು ಹೇಳುವಲ್ಲಿ ಅವರ ಸತ್ಯನಿಷ್ಠ ಪ್ರಾಮಾಣಿಕತೆಯನ್ನು ಗಮನಿಸಬೇಕು.

The Canerese country compared with the countries adjacent to it ಎಂಬ ಶೀರ್ಷಿಕೆ ಏನೇ ಸೂಚಿಸಲಿ, ಅದರಲ್ಲಿ ಸರ್ವಜ್ಞ

ಕವಿ, ಕನ್ನಡ ನಾಡು ನುಡಿಯ ಬಗ್ಗೆ ಹೇಳಿದ್ದನ್ನು ಅನುವಾದಿಸಿ ಕೊಟ್ಟಿದ್ದಾರೆ. ಇನ್ನೊಂದು ಲೇಖನದಲ್ಲಿ ದ್ರಾವಿಡ ಅಂಕಿಗಳನ್ನು, ತೊಡ, ಕೋತ ಎಂಬ ನೀಲಗಿರಿ ಪರಿಸರದ ಶಬ್ದಗಳ ಮೂಲವನ್ನು ವಿವೇಚಿಸಿದ್ದಾರೆ. ಸಂಸ್ಕೃತಕ್ಕೆ ಸೇರಿರುವ ದ್ರಾವಿಡ ಅಂಶಗಳನ್ನು ಮತ್ತೊಂದು ಲೇಖದಲ್ಲಿ ಹೇಳಿದ್ದಾರೆ. ಕೊಡವರ ಜೀವನಕ್ಕೆ ಸಂಬಂಧಿಸಿದ ಲೇಖಗಳೂ ಇವೆ. ಮಹತ್ವದ್ದೆಂದರೆ, ನಿಜಗುಣ ಶಿವಯೋಗಿಗಳು ತಮ್ಮ 'ವಿವೇಕಚಿಂತಾಮಣಿ' ಕೃತಿಯಲ್ಲಿ ಭಾರತೀಯ ಸಂಗೀತ ಶಾಸ್ತ್ರದ ಬಗ್ಗೆ ಹೇಳಿದ್ದನ್ನು ವಿವರಿಸಿದ್ದಾರೆ. ಇನ್ನು ಶಾಸನಗಳ ಕುರಿತು ಅವರು ಇಟ್ಟುಕೊಂಡಿದ್ದ ದೃಷ್ಟಿಕೋನವೇ ಬೇರೆ. ಇತರ ಶಾಸನತಜ್ಞರಿಗೆ ರಾಜಕೀಯ, ಧಾರ್ಮಿಕ ಇತಿಹಾಸ ಮಹತ್ವದ್ದಾದರೆ ಕಿಟೆಲರು ಅವುಗಳ ಭಾಷಾನ್ವಯ ವಿವೇಚನೆ ಮಾಡಿದ್ದಾರೆ.

ಮೌಲಿಕ ವಿಚಾರಗಳಿಂದ ಕೂಡಿದ ಅವರ Notes on Indian Prosody and Poetry ಎಂಬ ಲೇಖವನ್ನು (IER 1974) ಪ್ರತ್ಯೇಕವಾಗಿ ಹೆಸರಿಸಬೇಕು. ಕಿಟೆಲರು ಓದ್ದಿದ ಹಲವಾರು ನಡುಗನ್ನಡ ಕಾವ್ಯಗಳಲ್ಲಿಯ ಗೇಯಗುಣವನ್ನು ಅವರು ಮೆಚ್ಚಿಕೊಂಡಿದ್ದರು. ಅವುಗಳ ವೈವಿಧ್ಯವನ್ನು ಗಮನಿಸಿದ್ದರು. ಅದರಿಂದ ಪ್ರೇರಿತರಾಗಿ ಈ ಲೇಖನವನ್ನು ಬರೆದರು. ಅದರಲ್ಲಿ ಸುರುವಿಗೆ ವೈದಿಕ ಛಂದಸ್ಸಿನ ಮೂಲ ಹಾಗೂ ಅದರ ಪ್ರಕಾರಗಳನ್ನು ಹೇಳಿಯಾದ ಮೇಲೆ ಪಿಂಗಳನ ಛಂದಶ್ಶಾಸ್ತ್ರವನ್ನು ವಿವರಿಸಿದ್ದಾರೆ. ವಿಶೇಷವೆಂದರೆ ಭಾರತೀಯ ಛಂದಶ್ಶಾಸ್ತ್ರದ ಮೇಲೆ ಗ್ರೀಕ್, ಲ್ಯಾಟಿನ್‌ಗಳ ಪ್ರಭಾವ ಬೀರಿರಬೇಕು ಎಂಬ ಅವರ ನಿಲುಮೆ ಪ್ರಶ್ನಾರ್ಹವಾಗಿದೆ.

ಈ ಲೇಖನದ ಕೊನೆಯಲ್ಲಿ ಕರ್ನಾಟಕದ ಹಾಡಿನ ಮಟ್ಟುಗಳನ್ನು ಪ್ರಸ್ತಾಪಿಸಿ, ಅವುಗಳ ವೈವಿಧ್ಯದ ಬಗೆಯನ್ನು ಕೊಂಡಾಡಿದ್ದಾರೆ. ಉದಾಹರಣೆಯಾಗಿ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ 'ಶ್ರೀಕೃಷ್ಣಪಾರಿಜಾತ' ಸಂಗೀತ ನಾಟಕದಲ್ಲಿ ಬರುವ ಅಸಾವೇರಿ, ಪಂತುರಾವಳಿ, ಕಲ್ಯಾಣಿ ಮುಂತಾದ ರಾಗಗಳನ್ನು ಹೇಳಿ ತಮ್ಮ ಲೇಖವನ್ನು ಈ ರೀತಿಯಾಗಿ ಸಮಾರೋಪ ಮಾಡಿದ್ದಾರೆ.

This writer's long-cherished wish is that Hindu prosody and music should be taught in all native Christian Schools, so that the time may come when highly gifted youths,.will be enabled to compose poems.

ಇದೇ ವಿಚಾರವನ್ನು ಬಾಸೆಲಿನ ಕೇಂದ್ರ ಸಮಿತಿಗೂ ತಿಳಿಸುವಷ್ಟು ಅವರಲ್ಲಿ ಈ ಕುರಿತು ನಿಶ್ಚಲ ಭಾವವಿದ್ದಿತು. (Conviction) ಆದರೆ ಅದಕ್ಕೆ ಒಪ್ಪಿಗೆ ಸಿಗಲಿಲ್ಲ. ಮಾತ್ರವಲ್ಲ ಆ ರೀತಿ ಕವಿತೆಯನ್ನು ರಚಿಸಬಾರದು - ಎಂಬರ್ಥದಲ್ಲಿ ಎಚ್ಚರಿಕೆ ನೀಡಿದಂತೆ ಕಾಣುತ್ತದೆ.

ಹಿಂದೂಧರ್ಮ ವಿವೇಚನೆ

ಮಿಶನರಿಗಳಾದವರು, ಹಿಂದೂ ಧರ್ಮದ ಕೃತಿಗಳನ್ನು ಓದುತ್ತಿದ್ದರು. ಆಗೆಲ್ಲ ಅವುಗಳಲ್ಲಿ ದೋಷ ಹುಡುಕಿ ಆ ಮೂಲಕ ಕ್ರೈಸ್ತ ಧರ್ಮದ ಮೇಲ್ಮೆಯನ್ನು ತೋರಿಸುವ ದೃಷ್ಟಿಕೋನವು ಸಾಮಾನ್ಯವಾಗಿ ಕಂಡುಬರುತ್ತದೆ. ಕಿಟೆಲರಲ್ಲಿ ಅದು ಗೌಣವಾಗಿದ್ದಿತು. ಅವರ ಅಕೆಡೆಮಿಕ್ ರೂಪದ ವ್ಯಾಸಂಗ ಪ್ರವೃತ್ತಿಯಿಂದಾಗಿ ತಮ್ಮ ಮೌಲಿಕ ವಿಚಾರಗಳನ್ನು ಗ್ರಂಥ ಹಾಗೂ ಲೇಖನ ರೂಪದಲ್ಲಿ ವ್ಯಕ್ತಪಡಿಸಿದರು. ಹಾಗೆ ಅವರ ಮೂರು ಗ್ರಂಥಗಳು ಪ್ರಕಟವಾಗಿವೆ. ಹಿಂದೂ ದೇವರುಗಳ ಬಹುರೂಪತ್ವ ಹಾಗೂ ಸರ್ವವ್ಯಾಪಕತ್ವಗಳ ಕುರಿತು ಒಂದೆಡೆ ಮಾಡಿದ ಭಾಷಣವು ಪುಸ್ತಕರೂಪದಲ್ಲಿ ಹೊರಬಂದಿದೆ (Short survey on the Vedic polytheism and pantheism) ಕೊನೆಯಲ್ಲಿ ಈ ಅಂಶಗಳ ಟೀಕೆ ಮಾಡುತ್ತ ಕ್ರೈಸ್ತ ಧರ್ಮದಲ್ಲಿ ಅವು ಇಲ್ಲದ್ದರ ಬಗ್ಗೆ ಹೊಗಳಿಕೆ ಬಂದಿದೆ.

ಎರಡನೆಯ ಕೃತಿ - A tract on sacrifice ಎಂಬುದು, ಅವರ ವೈದುಷ್ಯಕ್ಕೆ ಕನ್ನಡಿ ಹಿಡಿದಂತಿದೆ. ಯಜ್ಞಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಆ ಮೊದಲು ಯಾರೂ ಒಟ್ಟಂದದಲ್ಲಿ ಅಭ್ಯಾಸ ಮಾಡಿ ಬರೆದಿರಲಿಲ್ಲ. ಪಾಪಕ್ಷಾಲನೆಗಾಗಿ ಹುಟ್ಟಿದ ಯಜನ ಪದ್ಧತಿಯು ಯಹೂದ್ಯ ಹಾಗೂ ಆರ್ಯ ಜನಾಂಗದಲ್ಲಿ ಹೇಗೆ ಬೆಳೆದು ಬಂದಿತು

ಎಂಬುದನ್ನು ವಿವರಿಸಿದ್ದಾರೆ. ಭಾರತದ ಆರ್ಯರಲ್ಲಿ ೨೦ಕ್ಕೂ ಮೇಲ್ಪಟ್ಟ ಯಜ್ಞ ವಿಧಿಗಳಿದ್ದು, ಅವುಗಳ ವಿವರಗಳನ್ನು ವಿವಿಧ ಸಂಹಿತೆ, ಶ್ರೌತಸೂತ್ರಗಳ ಆಧಾರದಿಂದ ಕೊಟ್ಟಿದ್ದಾರೆ. ಮತ್ತು ಅಗ್ನಿ, ವಾಯು, ವರುಣ ಮುಂತಾದ ದೇವತೆಗಳ ಉಪಾಸನೆಯಲ್ಲಿ ಮಂತ್ರವೇ ಯಜ್ಞ ಕಾರ್ಯದ ಸಾಧನವಾಯಿತು ಎಂದಿದ್ದಾರೆ. ಇದಕ್ಕೆ ಪ್ರತಿಯಾಗಿ ಪಶ್ಚಿಮ ದೇಶಗಳಲ್ಲಿ ಪ್ರಾಣಿಬಲಿ ಸಾಮಾನ್ಯವಾಗಿದ್ದಿತು.

ಇತ್ತ ಆರ್ಯೇತರರು (ಅನಾರ್ಯರು ಎನ್ನೋಣ ಬೇಡ) ಭಾರತ ಮಾತ್ರವಲ್ಲದೆ ಜಗತ್ತಿನ ಇತರ ಕಡೆಗಳಲ್ಲಿಯೂ ಇದ್ದವರಾಗಿ ಅವರಿಗೆ ಶಕ್ತಿದೇವತೆಯ ಆರಾಧನೆ ಮಹತ್ವದ್ದಾಗಿತ್ತು. ಆ ಕಾರಣದಿಂದ ಪ್ರಾಣಿಬಲಿಯು ಅವಶ್ಯವಾಗಿ ನಡೆಯುತ್ತಿತ್ತೆಂಬ ಮಾತಿಗೆ ತಿರುಗಿದ್ದಾರೆ.

ಈ 'ಬಲಿ'ಯ ನಿಮಿತ್ತ ಮಾಡಿಕೊಂಡು ಕಿಟೆಲರು ಯೇಸುವಿನ ಬಲಿದಾನದ ಪ್ರಸ್ತಾಪ ಮಾಡಿದ್ದಾರೆ. ಯಜ್ಞ ವಿಧಿಯು ಪಾಪಪರಿಹಾರಕ್ಕಾಗಿ, ಮನಃಶಾಂತಿಗಾಗಿ ಇದೆಯೆಂದಾದರೆ ಆ ಶಾಂತಿಯು ಯೇಸುವನ್ನು ನಂಬಿದಲ್ಲಿ ಶಾಶ್ವತವಾಗಿ ದೊರೆಯುವುದು ಎಂದು ಸಾರಿದ್ದಾರೆ. ಈ ಗ್ರಂಥದಲ್ಲಿ ಹೆಜ್ಜೆ ಹೆಜ್ಜೆಗೂ ಸಂದರ್ಭಗಳು, ಆಧಾರಗಳು ತುಂಬಿವೆ. ಆದಾಗ್ಯೂ ವಿಷಯ ಮಂಡನೆಯ ದೃಷ್ಟಿಯಿಂದ ಗ್ರಂಥದ ಗಾತ್ರ ಕಿರಿದು. ಗ್ರಂಥಕ್ಕೆ 'ಯಜ್ಞತಂತ್ರಸುಧಾನಿಧಿ' ಎಂಬ ಭಾರತೀಯ ಹೆಸರಿಟ್ಟಿದ್ದು ಅನ್ವರ್ಥಕವಾಗಿದೆ.

Linga Cultus ಎಂಬುದು ಜರ್ಮನ್ ಭಾಷೆಯಲ್ಲಿದೆ. ಇದಾದರೂ ಅಕಡೆಮಿಕ್ ಜಾಡಿನಲ್ಲಿಯೇ ಮೂಡಿ ಬಂದಿದೆ. ದೇಶ ವಿದೇಶಗಳಲ್ಲಿಯ ವಿದ್ವಾಂಸರು ಇದರ ಮೂಲದ ಬಗ್ಗೆ ಹೇಳಿದ್ದನ್ನೆಲ್ಲ ಕ್ರೋಢೀಕರಿಸಿದ್ದಾರೆ. ಪ್ರಾರಂಭಿಸಿದವರು ಆರ್ಯರೋ, ಬೇರೆ ಆದಿಮ ಜನಾಂಗದವರೋ ಎಂಬುದನ್ನೆತ್ತಿಕೊಂಡು, ಆರ್ಯೇತರ ಪಕ್ಷದವರ ನಿಲುಮೆಯನ್ನೆಲ್ಲ ಬಲವಾಗಿ ಖಂಡಿಸಿದ್ದಾರೆ. ಇತ್ತ ಆರ್ಯರಿಂದ ಲಿಂಗ ಪೂಜೆ ಎಂದು ಕೆಲವು ಪಂಡಿತರು ಹೇಳಿದ್ದರೂ, ಆಧಾರಗಳು ದುರ್ಬಲವಾಗಿವೆ ಎನ್ನುತ್ತ ಅದು

ಆರ್ಯರಿಂದಲೇ ಆರಂಭವಾದ ಬಗ್ಗೆ ಇನ್ನು ಹಲವು ಆಧಾರಗಳನ್ನು ಮಂಡಿಸಿದ್ದಾರೆ.

ಆದಾಗ್ಯೂ ಪ್ರಾಚೀನ ಭಾರತದಲ್ಲಿಯ ಬ್ರಾಹ್ಮಣರು ಲಿಂಗ ಪೂಜೆಯನ್ನು ತತ್ವತಃ ಒಪ್ಪಿರಲಿಲ್ಲ, ಶಿವನ ಪ್ರತೀಕವಾಗಿ ಲಿಂಗವನ್ನೆ ಪರಿಭಾವಿಸಿದ ಮೇಲೆ ಈ ಉಪಾಸನೆ ಮಧ್ಯಯುಗೀನ ಭಾರತದಲ್ಲಿ ಗಟ್ಟಿಯಾಗಿ ನೆಲೆಗೊಂಡಿತು. ಶಂಕರಾಚಾರ್ಯರು ಲಿಂಗೋಪಾಸನೆಯ ಪುರಸ್ಕರ್ತರಾಗಿದ್ದರು. ಅದರ ಕಾರಣವೆಂದರೆ ಜೈನ, ಬೌದ್ಧ ಮತಗಳಿಗೆ ಜನ ಹೊರಳುವುದನ್ನು ತಡೆಗಟ್ಟುವುದಾಗಿತ್ತು. ಎಂಬುದು ಕಿಟೆಲರ ಅಂಬೋಣ.

ನಮಗೆ ಹೆಚ್ಚು ಪ್ರಸ್ತುತವಾದದ್ದೆಂದರೆ ಈ ಜರ್ಮನ್ ವಿವೇಚನೆಯಲ್ಲಿ ಕರ್ನಾಟಕದ ವೀರಶೈವರನ್ನು, ವಚನ ಸಾಹಿತ್ಯವನ್ನು ಆಧಾರವಾಗಿ ಅಲ್ಲಲ್ಲಿ ಕಾಣಿಸಿದ್ದುದು. ಇದಾದರೂ ವಿಷಯದ ಹರಹಿನ ದೃಷ್ಟಿಯಿಂದ ಚಿಕ್ಕ ಕೃತಿಯೇ. ಅದರಿಂದಾಗಿ ಪ್ರತಿ ವಾಕ್ಯದಲ್ಲಿಯೂ ಕಿಟೆಲರು ತಮ್ಮ ವಿದ್ವತ್ತನ್ನ ಬೆಳಗಿದಂತಾಗಿದೆ. ಲಿಂಗಪೂಜೆಯು ಇಂದಿಗೂ ಬಳಕೆಯಲ್ಲಿರುವುದರಿಂದ ಇದನ್ನು ಕನ್ನಡದಲ್ಲಿ ಹೊರತಂದರೆ ಪ್ರಯೋಜನವಿದೆ.

ಕ್ರೈಸ್ತ ಮತ ವಿಚಾರ

ಈ ನಿಟ್ಟಿನಲ್ಲಿ ಕಿಟೆಲರ ಧಾರ್ಮಿಕ ನಿಷ್ಠೆಯು ಭಾವನಾತ್ಮಕ ಹಾಗೂ ವೈಚಾರಿಕ ನೆಲೆಯಲ್ಲಿ ಬಿಂಬಿತವಾಗಿದೆಯೆಂಬುದನ್ನು ನೋಡಿದ್ದೇವೆ. ಅವರ 'ಕಥಾಮಾಲೆ' ಎಂಬ ಕೃತಿ ಮೊದಲಿನದರ ದ್ಯೋತಕವಾಗಿದೆ.

ಕಥಾಮಾಲೆ : ಮಿಶನರಿ ಜನರು ದೇಶೀಯ ಕಾವ್ಯವನ್ನು ಅಭ್ಯಸಿಸಬೇಕು, ಆ ರೀತಿಯಲ್ಲಿ ಕಾವ್ಯ ರಚಿಸಬೇಕು ಎಂಬ ನಿಲುಮೆಗೆ ಅನುಸಾರವಾಗಿ ಇದು ರಚಿತವಾಯ್ತು. ಕನ್ನಡ ಕಲಿಯಲಾರಂಭಿಸಿದ ಏಳೆಂಟು ವರ್ಷಗಳಲ್ಲಿಯೇ ಇಷ್ಟೊಂದು ಕವಿತ್ವಶಕ್ತಿಯನ್ನು ಪಡೆದದ್ದು ಅವರ ಬಹುಮುಖ ಪ್ರತಿಭೆಗೆ ನಿದರ್ಶನವಾಗಿದೆ.

ಕಿಟೆಲ್ ಭಾರತದ ಪ್ರಾಚೀನ ಕವಿಗಳ ಮಾದರಿಯಲ್ಲಿ ತನ್ನ ಕಾವ್ಯವನ್ನು ಶ್ರೀಕಾರದ ಮಂಗಳಶ್ಲೋಕದಿಂದ ಆರಂಭಿಸಿದ್ದಾರೆ.

ಶ್ರೀಜನಾರ್ಚಿತ ಸತ್ಯ ಸಾಕ್ಷಿಯೆ
ಭೂಜನೈಕೋಗುರುವೆ, ದೇವಜ
ರಾಜಪವನೀ ರವಿಯೆ, ಸುಪಥವೆ, ಜೀವದಧಿಪತಿಯೇ।
ತೇಜದುದಯವೆ ದೇವಶಾಂತಿಯೆ
ಮೂಜಗನ್ನಾಥೇಸು ನಿನ್ಮುಖ
ಮಾಜಿಕೊಳ್ಳದೆ ಮೂಡು ಭಕ್ತರ ಹೃದಯಕಮಲದೊಳ ॥

ಮುಂದೆ ಯೇಸುವಿನ ಜನನದಿಂದ ಆರಂಭಿಸಿ ಅವನ ದಿವಾರೋಹಣದ ವರೆಗಿನ ಕಥೆ ಸಾಗಿಬಂದಿದೆ. ಆ ಬದುಕಿನ ವಿವಿಧ ಘಟನೆಗಳು ಕಥೆಯ ರೂಪವನ್ನು ತಾಳಿದ್ದರಿಂದ ಇದಕ್ಕೆ 'ಕಥಾಮಾಲೆ' ಎಂದು ಕರೆದಿದ್ದಾರೆ. ಕವಿ ಕಿಟೆಲರ ಗಮನ ನೇರ ಕಥಾ ನಿರೂಪಣೆಯಲ್ಲಿದೆ, ವರ್ಣನೆಗಳಲ್ಲಿ ಅಲ್ಲ. ಆದರೆ ಉಪದೇಶದ ನುಡಿಗಳು ಅಲ್ಲಲ್ಲಿ ಕಂಗೊಳಿಸುತ್ತವೆ. ಕ್ರಿಸ್ತನ ನೀತಿ ಬೋಧೆಯಿರುವ ಪ್ರಕರಣದ (೧೪ನೆಯದು) ಕೊನೆಯ ನುಡಿಯಿದು:

ಪಾಪಸಾಗರ ದಾಟಿ ಸಗ್ಗಕೆ
ಪೋಪ ಹಡಗವನೇಸು ವೊಡೆಯನು
ಕಾಪು ಕಾಯ್ವದು, ಕಾಯದಿದ್ದರೆ ಕೇಳಿರಾಳುಗಳೇ।
ದೀಪವಿಲ್ಲದ ಗಾಢದಿರುಳಲಿ
ಶಾಪದಲೆಗಲು ಮೊಡೆದು ಒಡೆಯಲು
ತಾಪದಿಂ ನೀವಲೆಗಳೊಳ್ ಮುಳು ಮುಳುಗಿ ಪೋಗುವಿರಿ॥

ವಿದೇಶೀಯನೊಬ್ಬನಿಂದ ರಚಿತವಾದದ್ದೆಂದು ಯಾರಿಗೂ ಅನ್ನಿಸದಷ್ಟು ಈ ಪದ್ಯ ದೇಶೀಯವಾಗಿದೆ.

ಕಥಾಮಾಲೆಯಲ್ಲಿ ೪೭೫ ಪದ್ಯಗಳಿವೆ. ಷಟ್ಪದಿಗಳು ಅರ್ಧದಷ್ಟಿದ್ದರೆ ಉಳಿದವುಗಳು ಕೀರ್ತನರೂಪದಲ್ಲಿವೆ. ಕಿಟೆಲರಿಗೆ ಮೆಚ್ಚಿನ ಧಾಟಿಯೆಂದರೆ

ಮಟ್ಟ ತಾಳದ ಪೂರ್ವಿರಾಗ. ಎಲ್ಲ ನುಡಿಗಳಲ್ಲಿಯೂ ಹಳಗನ್ನಡದ ವೈಶಿಷ್ಟವಾದ ದ್ವಿತೀಯ ಪ್ರಾಸವನ್ನು ತಪ್ಪದೇ ಕಾಯ್ದುಕೊಂಡಿದ್ದಾರೆ. ಅಲ್ಲಲ್ಲಿ ಸಂಧಿದೋಷ, ಶಿಥಿಲಜೋಡಣೆ ಕಂಡು ಬಂದರೂ ಅವು ನಗಣ್ಯ.

ಕಥಾಮಾಲೆಯು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ ಅಪೂರ್ವ ಕೃತಿಯಾಗಿದೆ. ಮೊದಲಲ್ಲಿ ಶಾಸ್ತ್ರವೇತ್ತನಾದ ಕಿಟೆಲ್ ಕವಿತ್ವದಲ್ಲಿಯೂ ಸಿದ್ಧಹಸ್ತನೆಂಬುದು ತಿಳಿದು ಬಂದದ್ದು. ಮಾತ್ರವಲ್ಲ, ಇಷ್ಟೊಂದು ದೀರ್ಘ ಕೃತಿ ರಚಿತವಾದದ್ದು ಕ್ರೈಸ್ತ ಸಾಹಿತ್ಯದಲ್ಲಿ ಬೇರಾವುದೂ ಇಲ್ಲ

ಎರಡನೆಯದಾಗಿ ಇದು ಹೊಸಗನ್ನಡ ಸಾಹಿತ್ಯದಲ್ಲೇ ಮೊದಲ ಖಂಡಕಾವ್ಯ. (minor epic.) ಕೊನೆಯದಾಗಿ, ಕ್ರೈಸ್ತರಿಗೆ ಪ್ರಿಯವಾದ ಯೇಸುವಿನ ಜೀವನ ಕಥೆಯನ್ನು ಭಾವುಕರು ಮನೆಯಲ್ಲಿ ಹಾಡಿಕೊಂಡು ತೃಪ್ತಿಪಡುವುದಕ್ಕೆ ಅವಕಾಶ ಒದಗಿದ್ದುದು.

ಇನ್ನೀಗ ಕೆಲವು ಗದ್ಯಕೃತಿಗಳನ್ನು ಪರಿಶೀಲಿಸೋಣ: '**ಯೇಸು ಕ್ರಿಸ್ತನ ಶ್ರಮೇಚರಿತ್ರೆ**' ಯೇಸುವಿನದೇ ಕಥೆಯುಳ್ಳದ್ದು. ಅವನನ್ನು ಶಿಲುಬೆಗೇರಿಸಿದ ಒಂದು ವಾರದ ಹಿಂದಿನಿಂದ ಈ ಕಥೆ ಆರಂಭವಾಗಿ, ಕಡೆಯಲ್ಲಿ ಯೇಸುವು ತನ್ನ ಶಿಷ್ಯರ ಕನಸಿನಲ್ಲಿ ಕಾಣಿಸಿಕೊಳ್ಳುವವರೆಗೆ ಮುಂದುವರಿಯುತ್ತದೆ. ನಾಲ್ಕೂ ಸುವಾರ್ತೆಗಳಿಂದ ಆಯ್ದ ಭಾಗಗಳಿವೆ. ಒಂದು ವಾರ ನಡೆದಂತೆ ಘಟನೆಗಳನ್ನು ಹೊಂದಿಸಲಾಗಿದೆ. ಉದ್ದಕ್ಕೂ ಸರಳವಾದ ನಿರೂಪಣೆ; ಅಂತೂ ಮನತಟ್ಟುವಂತಿದೆ.

'**ಪರಮಾತ್ಮ ಜ್ಞಾನ**'. ಹೌದು. ಇದು ಹಿಂದೂ ಧರ್ಮದಲ್ಲಿಯ ಪರಮಾತ್ಮನ ಕಲ್ಪನೆಯ ಟೀಕಾ ಪುಸ್ತಕವಾಗಿದೆ. ಆದರೆ ಅದನ್ನು ಮಂಡಿಸಿದ ರೀತಿ ವಿಶಿಷ್ಟವಾದುದು. ಅದರ ಆರಂಭ ನೋಡಿರಿ:

"ದಕ್ಷಿಣಪಥದಲ್ಲಿ ರಾಯಪುರವೆಂಬುದು ಒಂದು ಊರು. ಅದರಲ್ಲಿ ಸುಚಿತ್ತಿ ಎಂಬ ಶಾನಭೋಗನೂ ರಂಗನೆಂಬ ವ್ಯಾಪಾರಸ್ಥನೂ ಇದ್ದರು. ಅವರು ನನ್ನದು, ತನ್ನದು ಎಂಬ ಹೊಟ್ಟೆಕಿಚ್ಚಿಲ್ಲದೆ ಪ್ರಾಣಗೆಳೆಯರಾಗಿದ್ದರು.

ಅಣ್ಣನಾದ ಸುಚಿತ್ರಿಯು ಕಾಲಗತಿಯಲ್ಲಿ ಜಗದ್ರಕ್ಷಕನಾದ ಯೇಸುಕ್ರಿಸ್ತನ ಭಕ್ತನಾದರೂ ಅವರ ಗೆಳೆತನವು ಹಾಗೆ ಉಳಿಯಿತು".

ಇವರಿಬ್ಬರೂ ಒಂದು ರಾತ್ರಿ ಮನುಷ್ಯನ ಪಾಪ ಪುಣ್ಯ, ದೇವರು ಈ ವಿಷಯವಾಗಿ ಚರ್ಚೆ ನಡೆಸಿದ ಹಾಗೆ ಮುಂದುವರಿಯುತ್ತದೆ. ಸುರುವಿಗೆ ಹಿಂದೂ ದೈವತದ ಬಗ್ಗೆ ಒಳ್ಳೆಯ ಮಾತುಗಳೇ ಇದ್ದರೂ, ಕ್ರಮೇಣ ಅದ್ವೈತ ಮಂಡಿತ ದೈವಾರಾಧನೆಯ ಟೀಕೆ ಬಂದಿದೆ. ಸಂಭಾಷಣಾ ರೂಪದಲ್ಲಿ ಈ ಬಗೆಯ ನಿರೂಪಣೆಯನ್ನು ಈ ಮುಂಚೆ ಬಾಸೆಲ್ ಮಿಶನ್ನಿನ ಮೊಗ್ಲಿಂಗ್ ಬಳಕೆಯಲ್ಲಿ ತಂದಿದ್ದರು.

ಕ್ರೈಸ್ತ ಸಭಾಚರಿತ್ರೆ (೧೮೬೮): ಕಿಟೆಲ್ ರಚಿಸಿದ ಬೃಹತ್ ಗ್ರಂಥವಿದು. ಸುಮಾರು ೭೦೦ ಪುಟಗಳ ಈ ಕೃತಿ ಕ್ರೈಸ್ತ ಸಾಹಿತ್ಯದ ಯಾವುದೇ ಕನ್ನಡ ಗ್ರಂಥಕ್ಕಿಂತ ದೊಡ್ಡ ಪ್ರಮಾಣದಲ್ಲಿದೆ. ಕ್ರಿಸ್ತಶಕಾರಂಭದಿಂದ ೧೮೬೮ರ ವರೆಗಿನ ಕ್ರೈಸ್ತ ಸಮುದಾಯದ ಇತಿಹಾಸ ಇಲ್ಲಿದೆ. ಕ್ರೈಸ್ತ ಸಭೆಯ ಹುಟ್ಟು, ಬೆಳವಣಿಗೆ, ವಿವಿಧ ದೇಶಗಳಲ್ಲಿ ಇವರ ವಿಸ್ತಾರ, ಪ್ರೊಟೆಸ್ಟಂಟ್ ಪಂಗಡದ ಉದಯ ಇವುಗಳ ಜೊತೆಗೆ ಕ್ರೈಸ್ತ ಸಭೆಯಲ್ಲಿ ಆಗಾಗಿನ ಘರ್ಷಣೆ, ವಿಶೇಷತಃ ಪೋಪರಿಗೂ ಲೂಥರನಿಗೂ ಆದ ಜಗಳ ಇವು ಕೂಡಾ ಇಲ್ಲಿ ಕಾಣಸಿಕೊಂಡಿವೆ. ಆ ಮುಂದೆ ಭಾರತದಲ್ಲಿ ಕ್ರೈಸ್ತ ಸಭೆ ಉದಯವಾದ ಬಗೆ, ಅಲ್ಲಿಂದ ಬಾಸೆಲ್ ಮಿಶನ್ನಿನ ವಿವರ ಚರಿತ್ರೆ ಇವು ಬರಬೇಕಾದದ್ದು ಕ್ರಮಪ್ರಾಪ್ತವಾದದ್ದೇ. 'ಪ್ರತಿಯೊಬ್ಬ ಕ್ರೈಸ್ತನು ತನ್ನ ಇತಿಹಾಸವನ್ನು ಅರಿಯಬೇಕು. ತನ್ನ ಪೂರ್ವಿಕರು ಹ್ಯಾಗೆ ಕ್ರೈಸ್ತರಾದರು? ಇದೆಲ್ಲ ತಿಳಿಯಬೇಕಾದರೆ ಕ್ರೈಸ್ತಸಭೆಯ ಚರಿತ್ರವನ್ನು ಅಭ್ಯಸಿಸಬೇಕು' ಎಂದು ಕಿಟೆಲ್ ತಮ್ಮ ಪೀಠಿಕೆಯಲ್ಲಿ, ಈ ಸುದೀರ್ಘ ವೃತ್ತದ ಸಮರ್ಥನೆ ಮಾಡಿಕೊಂಡಿದ್ದಾರೆ. ಮಾತ್ರವಲ್ಲ, ಇದರ ವಾಚನವು ದೇವರಲ್ಲಿ ವಿಶ್ವಾಸವನ್ನು ಹೆಚ್ಚಿಸುತ್ತದೆ ಎಂದಿದ್ದಾರೆ.

ಈ ಚರಿತ್ರೆಯನ್ನು ನಿರೂಪಿಸುವಲ್ಲಿ ಕಿಟೆಲರು ಸಂದರ್ಭಿಸಿದ ಪಾಶ್ಚಾತ್ಯ ಗ್ರಂಥಗಳು ಅಸಂಖ್ಯವಾಗಿವೆ. ಹಿಂದೂ ಧರ್ಮದ ವಿಚಾರಗಳನ್ನು

ತರಬೇಕಾದ್ದರಿಂದ ಹರಿವಂಶ ಮುಂತಾದ ಪುರಾಣಗಳನ್ನು ಉಲ್ಲೇಖಿಸಿದ್ದಾರೆ. ಹಾಗೇನೇ ಇಲ್ಲಿಯ ಕೆಥಲಿಕರ ವಿಷಯವೂ ಬಂದಿದೆ. ನನಗೆ ಖುಷಿಕೊಟ್ಟ ವಿಷಯವೆಂದರೆ ಕಿಟೆಲರು ಭಾರತದ ಪ್ರಸ್ತಾಪ ಬಂದಲ್ಲೆಲ್ಲ 'ನಮ್ಮ ಹಿಂದೂ ದೇಶ' ಎಂದೇ ಕರೆದಿದ್ದಾರೆ.

ಈ ಗ್ರಂಥದಲ್ಲಿ ದೇಶವಿದೇಶಗಳಲ್ಲಿ ನಡೆದ ಹತ್ತಾರು ಐತಿಹಾಸಿಕ ಘಟನೆಗಳ ಉಲ್ಲೇಖ ಬರುತ್ತಿದೆಯಾದ್ದರಿಂದ ಇದೊಂದು ಉಪಯುಕ್ತ ದಾಖಲೆಯಾಗಿದೆ. ಕ್ರೈಸ್ತಮತದ ಕಿರು ವಿಶ್ವಕೋಶವೆಂದು ತಿಳಿದರೂ ತಪ್ಪಲ್ಲ.

ಕಿಟೆಲರ ಶಬ್ದಾಸಕ್ತಿ

ಯಾವುದಾದರೊಂದು ಶಬ್ದದ ಅರ್ಥ ತಿಳಿಯಬೇಕೆಂದರೆ ಡಿಕ್ಷನರಿಯಲ್ಲಿ ಅದನ್ನು ನೋಡಿಬಿಟ್ಟು ಆಮೇಲೆ ಮರೆತುಬಿಡುತ್ತೇವೆ. ಚಿಕಿತ್ಸಕ ವಿದ್ವಾಂಸರು ಅಲ್ಲಿಗೆ ಅದನ್ನು ಬಿಡದೆ ಆ ಶಬ್ದದ ಮೂಲ, ಇಂಥದ್ದೇ ಶಬ್ದ ಬೇರೆಡೆ ಜ್ಞಾತಿಪದವಾಗಿ ಬಂದ ಬಗೆ ಮುಂತಾಗಿ ಯೋಚಿಸುತ್ತಾರೆ. ಮುದ್ದಣ, ಗೋವಿಂದ ಪೈ, ದ.ರಾ. ಬೇಂದ್ರೆ, ಇವರು ಆ ಬಗೆಯವರು. ಈ ಹಿಂದೆ ಸೂಚಿಸಿದಂತೆ ಕಿಟೆಲರು ಶಬ್ದದ ಜಾಡನ್ನು ಹಿಡಿದು, ಆ ಭಾಷೆ, ಅದರ ವ್ಯಾಕರಣ, ಕವಿತೆಯಲ್ಲಿದ್ದರೆ ಅದರ ಛಂದಸ್ಸು ಹೀಗೆ ಅನ್ವೇಷಣೆಗೈಯುತ್ತಿದ್ದರು. ಇತರರಿಗೂ ಅದು ತಿಳಿಯಬೇಕೆಂಬ ಹಂಬಲವುಳ್ಳವರಾಗಿದ್ದರು.

ಕನ್ನಡ ಕಾವ್ಯಮಾಲೆ ಯಲ್ಲಿ ಶಬ್ದಾರ್ಥ ಪದಗಳು ವಿಪುಲವಾಗಿವೆ ಯೆಂಬುದನ್ನು ಹೇಳಿದೆಯಷ್ಟೆ. ಆಗೆಲ್ಲ ಶಬ್ದಗಳ ಮೂಲರೂಪವನ್ನೂ ಕೊಡಲು ಯತ್ನಿಸಿದ್ದಾರೆ. ಪಂಚತಂತ್ರದ ಕತೆಯ ಅವರ ಪುಸ್ತಕ ಇದೆಯಷ್ಟೆ. ಅದರ ಮುದ್ರಣವಾದ ಮೇಲೆ ತಮ್ಮ ಸ್ವಂತ ಪ್ರತಿಯ ಹಿಂಬದಿಗೆ ಅನೇಕ ಶಬ್ದಗಳ ಮೂಲ ರೂಪಗಳನ್ನು ಗುರುತು ಹಾಕಿಕೊಂಡಿದ್ದ ಆ ಪ್ರತಿ ಬಾಸೆಲಿನಲ್ಲಿಯ Archives ನಲ್ಲಿ ನನಗೆ ನೋಡಲು ಸಿಕ್ಕಿತು. ಆ ಕೆಲವನ್ನು ಮಾದರಿಯಾಗಿ ಇಲ್ಲಿ ಕೊಡುತ್ತಿದ್ದೇನೆ.

– ಮಂತ್ರಿ from ಮನ್, to think, ಯೋಚಿಸು, ಯೋಚಿಸುವವ.

ಸಂತೋಷ –from ತುಷ್, to be glad, to rejoice. ಸಂತುಷ್ to gladden.

– ಅತಿಶಯ – from ಶಿ to lie. ಅತಿಶೀ, to lie beyond.

ಇತ್ತ ಕ್ರೈಸ್ತ ಸಭಾಚರಿತ್ರೆಯಲ್ಲಿಯೂ ಶಬ್ದಕೋಶವನ್ನು ಕೊಟ್ಟಿದ್ದಾರೆ. ಅದರ ಒಂದು ಕಾರಣವೆಂದರೆ ಅನೇಕ ಗ್ರೀಕ್, ಲ್ಯಾಟಿನ್ ಪದಗಳು, ಹೆಸರುಗಳು ಇವನ್ನು ಕನ್ನಡ ರೂಪಕ್ಕೆ ತಿರುಗಿಸುವ ಅಗತ್ಯವಿತ್ತು. ಕಿಟೆಲ್ ಹಾಗೆ ಮಾಡಿದವುಗಳು ಆ ಗ್ರಂಥದ ೭೦ ಪುಟಗಳನ್ನು ಆಕ್ರಮಿಸಿದೆ. ಇಲ್ಲಿಯ ಅವರ ಪದಸೃಷ್ಟಿ ಮೂರು ಬಗೆಯದು.

– ಮೂಲದ ಅಂಕಿತ ನಾಮಗಳನ್ನು ನಮ್ಮ ಉಚ್ಚಾರಕ್ಕೆ ಅನುಗುಣವಾಗಿ ಪರಿವರ್ತಿಸುವುದು. ಉದಾ.ಗೆ Catherene - ಕ್ಯಾತರೀನಳು.

– ಇಂಥ ಪದಗಳ ಮೂಲಾರ್ಥವನ್ನು, ಗುರುತಿಸಿ ಅದನ್ನೇ ಅನುವಾದಿಸುವುದು. ಉದಾ. ಗೆ Anderson = Andre's son, ಆಂದ್ರೆಯ ಮಗ.

– ಕಿಟೆಲರ ಸ್ವತಂತ್ರ ವಿಚಾರ ಸರಣಿಯ ಶಬ್ದಸಿದ್ಧಿ. ಉದಾ.ಗೆ cather ಈ ಗ್ರೀಕ್ ಶಬ್ದದ ಅರ್ಥ one who deviates from an established church ಎಂಬುದಾಗಿದ್ದು, ಅದನ್ನು ಅನುಸರಿಸಿ 'ಕಥರತ್ವ' ಪದವನ್ನು ಸೃಷ್ಟಿಸಿದ್ದಾರೆ. ಇಲ್ಲಿ ಅವರು ಕಾಣಿಸಿದ ಅರ್ಥ The state of dissenting from popery.

ಹೀಗೆ ಶಬ್ದ ಜಿಜ್ಞಾಸೆ ಅವರಲ್ಲಿ ಸದಾ ಜಾಗೃತವಾಗಿದ್ದಿತು. ಯಾವದೊಂದು ಅರ್ಥದ ಬಗ್ಗೆ ಸಂಶಯವಿದ್ದರೆ. IA ಪತ್ರಿಕೆಯಲ್ಲಿ ಟಿಪ್ಪಣಿಯನ್ನು ಪ್ರಕಟಿಸುತ್ತಿದ್ದರು. ಇದೊಂದು ಮಾದರಿ:

'ಸಿಡಿಮದ್ದಿನ ಪುಡಿ. gunpowder ಭಾರತದಲ್ಲಿ ಇದರ ಉಪಯೋಗವು ಪ್ರಥಮತಃ ಎಂದು ಆಗಿದೆಯೆಂಬುದನ್ನು ಯಾರಾದರೂ ತಿಳಿಸುವರೆ?

ಹಳಗನ್ನಡದಲ್ಲಿ ಇದು ತದ್ಭವ ರೂಪದಲ್ಲಿ ದೊರೆಯುತ್ತದೆ. ಉದಾ.ಗೆ ಬಲಮದ್ದು, ಅಂಕದೌಷಧ. (IA. May 1872)

ಅದೇ ವರ್ಷದ ಜುಲೈ ಸಂಚಿಕೆಯಲ್ಲಿ elephant ಈ ಶಬ್ದವು ಕನ್ನಡ (ದ್ರಾವಿಡ) ಶಬ್ದವಾದ ಆನೆ ಎಂಬುದರಿಂದ ಬಂದಿರಬಹುದೆ ? ಆನೆಯೇ ಸಂಸ್ಕೃತದಲ್ಲಿ ಐರಾವತ ಆಗಿ ಮಾರ್ಪಟ್ಟು elephant ಎಂಬ ಪದ ರೂಪಗೊಂಡಿರಲು ಸಾಧ್ಯವೆ? ಎಂದು ಕೇಳಿದ್ದಾರೆ -

ಇದರರ್ಥ ಕನ್ನಡ (ದ್ರಾವಿಡ) ಮೂಲದ ಅನೇಕ ಶಬ್ದಗಳು ಸಂಸ್ಕೃತ ನಿಘಂಟುವಿನಲ್ಲಿ ಸೇರಿವೆ ಎಂದಾಯಿತಲ್ಲವೆ? ಕಿಟೆಲ್ ಅಂಥ ನೂರಾರು ಶಬ್ದಗಳ ಪಟ್ಟಿ ಮಾಡಿಕೊಂಡಿದ್ದು ತನ್ನ ನಿಘಂಟುವಿನಲ್ಲಿ ಕೆಲವನ್ನು ಪ್ರಕಟಿಸಿದ್ದಾರೆ.

ಕನ್ನಡ ಇಂಗ್ಲಿಷ್ ಶಬ್ದಕೋಶ

ಒಂದು ಭಾಷೆಯ ಜೀವಾಳ ಅದರ ಶಬ್ದಸಂಪತ್ತಿನಲ್ಲಿ ಇರುತ್ತದೆ. ಗದ್ಯಪದ್ಯಗಳಲ್ಲಿಯ ಅದರ ಪ್ರಯೋಗದಿಂದ, ನುಡಿಗಟ್ಟುಗಳಿಂದ ನಮಗೆ ಬದುಕಿನ ಸಾರವೇ ಕರಗತವಾಗುವುದು. ಶಬ್ದಗಳ ವ್ಯಂಜಕಗುಣವನ್ನು ಅರಿತಾಗಲೇ ಕಾವ್ಯದ ರಸಾಸ್ವಾದವನ್ನು ಗ್ರಹಿಸಬಹುದು. ಹೀಗೆ ಕನ್ನಡ ಶಬ್ದ ಸಂಪದದ ಜೀವಾಳವನ್ನು ಆತ್ಮಸಾತ್ ಮಾಡಿಕೊಂಡವರೆಂದು ಕುಮಾರವ್ಯಾಸ, ಮುದ್ದಣ, ಗೋವಿಂದ ಪೈ, ಕವಿ ಬೇಂದ್ರೆ ಈ ಕೆಲವರನ್ನು ಹೆಸರಿಸಬಹುದು. ಕಿಟೆಲರೂ ಹೌದು. ಇತರರು ತಮ್ಮ ಕೃತಿಗಳಲ್ಲಿ ಆ ಗುಣವಿಶೇಷವನ್ನು ತೋರ್ಪಡಿಸಿದ್ದರೆ ಕಿಟೆಲರು ಕನ್ನಡ ಶಬ್ದಪರ್ವತಕ್ಕೇನೆ ತೆಕ್ಕೆಹಾಕಿದರು.

ಕನ್ನಡಕ್ಕಾಗಿ ಒಂದು ಕೋಶವನ್ನು ತಯಾರಿಸಬೇಕು, ಮತ್ತು ಆ ಕೆಲಸವನ್ನು ಕಿಟೆಲರಿಗೆ ಒಪ್ಪಿಸಬೇಕು ಎಂಬ ಕಲ್ಪನೆ ಮೊದಲು ಯಾರಲ್ಲಿ ಮೂಡಿತು? ಬಾಸೆಲ್ ಮಿಶನ್ನಿನವರೇ ಆದ ಗುಂಡರ್ಟ್ ಮಲೆಯಾಳೀ ಭಾಷೆಗೊಂದು ಕೋಶವನ್ನು ತಯಾರಿಸಿದ್ದರಷ್ಟೆ. ಕನ್ನಡಕ್ಕೂ ಅಂಥದೊಂದು

ಇರಬೇಕು ಎಂಬ ವಿಚಾರವು ಪ್ರಾಯಶಃ ಈ ಹಿಂದೆ ಹೇಳಿದ ಮೊಗ್ಲಿಂಗರಿಗೆ ಮೊದಲು ಹೊಳೆದಿರಲು ಸಾಕು. ಬ್ರಿಟಿಶ್ ಸರಕಾರದ ಒಬ್ಬೊಬ್ಬ ಅಧಿಕಾರಿಗಳ ಮನಸ್ಸಿನಲ್ಲಿಯೂ ಇದ್ದಿರಬೇಕು. ಅಂಥವರಲ್ಲಿ ವಾಲ್ಟರ್ ಎಲಿಯೆಟ್, ಗಮನಿಸಬೇಕಾದ ಹೆಸರು. ಕೆಲಕಾಲ ಇವನು ಕರ್ನಾಟಕದಲ್ಲಿ ಅಧಿಕಾರಿಯಾಗಿದ್ದು ನಮ್ಮ ನಾಡುನುಡಿಯ ಬಗ್ಗೆ ಅಭಿಮಾನ ತಳೆದಿದ್ದ. ಮೊಗ್ಲಿಂಗ್ ಎಲಿಯಟ್ಟರ ನಡುವೆ ಪತ್ರವ್ಯವಹಾರ ನಡೆಯಿತು. (೧೮೭೭).

ಕೋಶದ ಕೆಲಸ ಪೂರ್ಣಾವಧಿಯ ಕೆಲಸ. ಕಿಟೆಲರನ್ನು ಮಿಶನ್ನಿನ ಕಾರ್ಯದಿಂದ ಮುಕ್ತಗೊಳಿಸಬೇಕು. ಅವರಿಗೆ ಮಾಸಾಶನ ದೊರಕಬೇಕು. ಈ ಆರ್ಥಿಕ ಸಹಾಯಕ್ಕಾಗಿ ಬ್ರಿಟಿಷ್ ಸರಕಾರಕ್ಕೆ ಯೋಜನೆಯನ್ನು ಯಾವ ಸ್ವರೂಪದಲ್ಲಿ ಕೊಡಬೇಕು ? ಯಾರ ಮುಖಾಂತರ? ಎಂಬೆಲ್ಲ ವಿಚಾರಗಳು ಆ ಪತ್ರವ್ಯವಹಾರದಲ್ಲಿ ಇವೆ. ಎಲಿಯೆಟ್ ಸೂಚಿಸಿದ ಪ್ರಕಾರ, ಸುಮಾರು ಮೂರು ವರ್ಷಗಳ ವರೆಗೆ ಕಿಟೆಲರ ಸಂಬಳವನ್ನೂ ಮುದ್ರಣ ವೆಚ್ಚವನ್ನೂ, ಕೋಶದ ೫೦ ಪ್ರತಿಗಳ ಬೆಲೆಯನ್ನೂ ಎಲ್ಲ ಸೇರಿ ಒಂದು ಸಾವಿರ ಪೌಂಡುಗಳನ್ನು ಸರಕಾರವು ಅನುದಾನವಾಗಿ ಕೊಡಬೇಕು ಎಂದಿದ್ದಿತು. ಅಂತಿಮವಾಗಿ ಆದದ್ದೆಂದರೆ ಒಂದು ಸಾವಿರ ಪೌಂಡು ಕೊಡಲಾಗುವುದು. ಅದಕ್ಕೆ ಪ್ರತಿಯಾಗಿ ೭೦೦ ಪ್ರತಿಗಳನ್ನು ಸರಕಾರಕ್ಕೆ ಪುಕ್ಕಟೆಯಾಗಿ ಕೊಡಬೇಕು ಎಂದಾಯಿತು! (ಆ ಹಣವನ್ನಾದರೂ, ಮೈಸೂರು, ಮುಂಬಯಿ, ಮದ್ರಾಸ್ ಮತ್ತು ಹೈದರಾಬಾದಿನಲ್ಲಿಯ ಬೊಕ್ಕಸಗಳಿಂದ ಕೊಡಲಾಗಿದೆ. ಮತ್ತು ೭೦೦ ಪ್ರತಿಗಳನ್ನು ಆ ಮೊತ್ತಗಳಿಗೆ ಅನುಗುಣವಾಗಿ ಹಂಚಲಾಯಿತು.)

ಆರಂಭದ ಆ ಪ್ರತೋದಕರಿಗೆ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೭-೮ ನೂರು ಪುಟಗಳ ಒಂದು 'ಸ್ಟ್ಯಾಂಡರ್ಡ್', ಆದರೆ, ಪ್ರಾಮಾಣ್ಯವಾದ ಶಬ್ದಕೋಶವೊಂದು ಸಿದ್ಧವಾದರೆ ಸಾಕು ಎಂದಿದ್ದಿತು. ಆದದ್ದೇನು ? ಮೂರು ವರ್ಷಗಳ ಬದಲಿಗೆ ೧೫ ವರ್ಷಗಳು ಹಿಡಿದವು. ಕೋಶವು ೧೭೦೦ ಪುಟಗಳಷ್ಟು ವಿಸ್ತಾರವನ್ನು ಪಡೆಯಿತು.

ಈ ಕೋಶದ ಕೆಲಸವನ್ನು ಕಿಟೆಲರಿಗೆ ಒಪ್ಪಿಸಲಾಗಿದೆ - ಎಂಬ ಸುದ್ದಿಯೇ ಆಗಿನ ವಿದ್ವಾಂಸ ವಲಯದಲ್ಲಿ ಸಂತೋಷವನ್ನುಂಟುಮಾಡಿತು. ಕಿಟೆಲ್ ಮಾಡ್ತಾರಲ್ಲವೆ; ಹ್ವಾ ! ಅಂದ ಮೇಲೆ ಕೇಳುವುದೇನಿದೆ ? ಎಂಬ ತೃಪ್ತಿಯ ಭಾವವು ಶಾಸನತಜ್ಞರಾದ ಬರ್ಗೆಸ್, ಫ್ಲೀಟರಿಗೆ ಮೂಡಿದ್ದಿತು. ಎ.ಸಿ.ಬರ್ನೆಲ್ ಅವರಂತೂ ಒಂದು ಹೆಜ್ಜೆ ಮುಂದೆ ಹೋದರು. ತಂಜಾವೂರಿನಿಂದ ಅವರು ೩-೯-೧೮೭೭ ರಂದು ಕಿಟೆಲರಿಗೆ ಈ ರೀತಿ ಪತ್ರ ಬರೆದರು.

I am delighted to hear that the Kannada dictionary is in hand. I shall be glad to contribute Rs. 1,500.- annually for 1877-78 and shall pay it quarterly through your Mangalore office. Next year if I am alive I will do what more can be done.

ಬರ್ನೆಲ್ ತಮಿಳು ನಾಡಿನಲ್ಲಿ ನ್ಯಾಯಾಧೀಶರಾಗಿದ್ದವರು. ತಮಗೆ ನೇರವಾಗಿ ಏನೂ ಸಂಬಂಧವಿರದ ಈ ಕನ್ನಡದ ಕೆಲಸಕ್ಕಾಗಿ ಅಪ್ರಾರ್ಥಿತ ಆರ್ಥಿಕ ಸಹಾಯವನ್ನು ನೀಡುವಷ್ಟು ಉದಾರಭಾವವನ್ನು ತೋರಿದ ಬರ್ನೆಲ್ ಬಗ್ಗೆ ನಿಜಕ್ಕೂ ನಾವು ಅಭಿಮಾನ ಪಡಬೇಕು.

ಆ ಮುಂದೆ ಕಿಟೆಲರು ಶಬ್ದ ಸಂಗ್ರಹ, ಅವುಗಳ ಪ್ರಯೋಗ ವಾಕ್ಯಗಳು, ಮೂಲರೂಪ, ಜ್ಞಾತಿಶಬ್ದಗಳು ಮುಂತಾದ ಕಾರ್ಯಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರು. ಆ ಕಾಲದ ಬಾಸೆಲ್ ಮಿಶನ್ನಿನ ವಾರ್ಷಿಕ ವರದಿಗಳಲ್ಲಿ 'ಬ್ರದರ್ ಕಿಟೆಲ್ ತಮ್ಮ ಸಾಹಿತ್ಯಕ ಕೆಲಸಗಳಲ್ಲಿ ಎಂದಿನಂತೆ ತೊಡಗಿದ್ದಾರೆ' ಎಂಬ ಧರತಿಯ ಮಾತುಗಳೇ ಕಂಡುಬರುತ್ತವೆ. ಕೋಶ ರಚನೆಯ ಈ ಕೆಲಸ ಹೆಚ್ಚಾಗಿ ಮಡಿಕೇರಿಯಲ್ಲಿ ನಡೆಯಿತೆಂಬುದನ್ನು ನೆನೆದಿರಬೇಕು.

ಈ ನಡುವೆ ಬ್ರಿಟಿಶ್ ಸರಕಾರದಿಂದ ವಿಶೇಷತಃ ಲಂಡನ್ನಿನಲ್ಲಿದ್ದ Secretary of state for India ಇವರಿಂದ ಒಂದು ಮಹತ್ತರವಾದ ಸೂಚನೆ ಬಂದಿತು. ಉತ್ತರ ಕರ್ನಾಟಕದ ಕನ್ನಡ ಭಾಷೆಗೂ ತುಂಗಭದ್ರೆಯ

ಕೆಳಗಿರುವವರ (ಮೈಸೂರು ಸಂಸ್ಥಾನ) ಭಾಷೆಗೂ ತುಂಬಾ ಭೇದವಿದೆ. ಉತ್ತರ ಕರ್ನಾಟಕದವರ ಭಾಷೆಗೆ ಸೂಕ್ತ ಪ್ರಾಧಾನ್ಯವನ್ನು ಕೊಡಬೇಕು. ಎಂದರೆ ಅಲ್ಲಿಯ ಶಬ್ದಗಳನ್ನು ಪ್ರತ್ಯೇಕವಾಗಿ ಕಾಣಿಸಬೇಕು ಎಂಬುದು ಅದರ ಆಶಯ. ಕಿಟೆಲರು (ದಿ. ೨೫.೨.೧೮೭೯) ಸುದೀರ್ಘವಾಗಿ ಉತ್ತರಕೊಟ್ಟಿದ್ದು, ಅದರಲ್ಲಿಯ ಎರಡು ಅಂಶಗಳನ್ನು ಇಲ್ಲಿ ಕಾಣಿಸುವೆ:

The form of government, laws, institutions, traditions and customs are nearly identical throughout the whole Canerese country, and the Canarese language, excepting style and the use of borrowed terms, is everywhere substantially the same.

As English dictionaries do not deal of the specialities of local dialects but of common English, so a Canerese dictionary has first of all to introduce the Canerese language (as such)... However, I shall not forget to advance any important points of difference... I trust my work will prove to be an accurate representation of what Canerese is to the south as well as to the North of Tungabhadra.

ಕನ್ನಡ ಭಾಷೆಯನ್ನು ಸಮಷ್ಟಿ ಸ್ವರೂಪದಲ್ಲಿ ಕಂಡವರಲ್ಲಿ ಕಿಟೆಲರೇ ಮೊದಲಿಗರು. ಕೋಶದ ಕೆಲಸವನ್ನು ಕೈಗೊಂಡು ಒಂದೆರಡು ವರ್ಷಗಳಲ್ಲಿ ಕಿಟೆಲ್ ಅದರ ಸ್ವರೂಪದ ಬಗ್ಗೆ ತಾನು ಈ ಕೆಳಗಿನ ಆಶಯಗಳನ್ನು ಇಟ್ಟುಕೊಂಡಿರುವುದಾಗಿ ಅದೇ ಪತ್ರದಲ್ಲಿ ಕಾಣಿಸಿದ್ದಾರೆ.

It aims to supply the want of a standard work on the Canerese language and literature, on the etymology of Canerese and of Dravida, and on the question as to how much the Sanskrit language has been enriched by Dravida. it is quite impossible to put aside any one of these considerations in the preparation of a Canerese dictionary.

ದ್ರಾವಿಡ (ನಮ್ಮ ಮಟ್ಟಿಗೆ ಕನ್ನಡ) ಭಾಷಾ ವಲಯದಿಂದ ಸಂಸ್ಕೃತಕ್ಕೆ ಹೋಗಿರಬಹುದಾದ ಶಬ್ದ ಸಂಪತ್ತಿನ ಬಗ್ಗೆ ಕಿಟೆಲ ವಿಶೇಷ ಆಸಕ್ತಿ ವಹಿಸಿದ್ದರು. ಆ ಬಗ್ಗೆ ಜರ್ಮನ್ ಭಾಷೆಯಲ್ಲಿಯೂ ಲೇಖ ಬರೆದಿದ್ದಾರೆ. (Dravidische Elements in den Sanskrit Dhatupathas) ಮತ್ತು ತಮ್ಮ ಕೋಶದ ಪ್ರಸ್ತಾವನೆಯಲ್ಲಿ ಅವುಗಳ ದೊಡ್ಡ ಪಟ್ಟಿಯನ್ನೆ ಕೊಡಮಾಡಿದ್ದರ ಹಿನ್ನೆಲೆ ಇದೇ ಆಗಿದೆ.

ಕೋಶ ರಚನೆಗಾಗಿ ವಿವಿಧ ಮೂಲಗಳಿಂದ ಹಾಗೂ ನಾನಾ ರೀತಿಯಲ್ಲಿ ಶಬ್ದಗಳನ್ನು ಸಂಗ್ರಹಿಸುವುದು, ಅವುಗಳ ಪ್ರಯೋಗ ವಾಕ್ಯಗಳನ್ನು ಪರಿಶೀಲಿಸಿ ಮತ್ತು ಜ್ಞಾತಿ ಶಬ್ದಗಳನ್ನು ಗುರುತಿಸಿ ಶಬ್ದಗಳಿಗೆ ಅರ್ಥಹಚ್ಚುವುದು – ಈ ಕೆಲಸ ಒಂದು ತಪಶ್ಚರ್ಯೆಯಂತೆ ಅಖಂಡವಾಗಿ ೧೦–೧೨ ವರ್ಷ ನಡೆಯಿತು. ಸುಮಾರು ಮೂವತ್ತು ಸಾವಿರ ಶಬ್ದಗಳಿಗೆ ಅರ್ಥ ಹಚ್ಚುವ ಕೆಲಸ ಒಬ್ಬನೇ ವ್ಯಕ್ತಿಯಿಂದ ! ಈ ಮೊದಲು ಹೇಳಿದ ಅಪ್ರತಿಮ ಮೇಧಾಶಕ್ತಿ ಹಾಗೂ ಅದ್ಭುತ ಸ್ಮರಣ ಶಕ್ತಿ ಇವು ಕೋಶರಚನೆಯಲ್ಲಿ ನೆಲೆನಿಂತವು.

ಕಿಟೆಲರಿಗೆ ಕೆಲವು ಸಹಾಯಕರೇನೊ ಇದ್ದರು. ಆದರೆ ಅವರದು ಕನ್ನಡದಲ್ಲಿ ಅರ್ಧಮರ್ಧ ಜ್ಞಾನ. ಅವರು ಮಾಡಿದ್ದ ತಪ್ಪುಗಳನ್ನು ಸರಿಮಾಡುವ ತಲೆಬೇನೆಯನ್ನು ಕಿಟೆಲರು, ಮುದ್ರಣ ನಡೆದಿದ್ದಾಗಲೂ ಸಹಿಸಬೇಕಾದ ಪರಿಸ್ಥಿತಿ ಇದ್ದಿತು. ಶಬ್ದಗಳ ನಮೂದುಗಳನ್ನು ನೋಡುವುದು. ತಿದ್ದುವುದು ಈ ಕೆಲಸಗಳಿಂದಾಗಿ ಅವರ ಕಣ್ಣಿನ ನರಗಳು ನಿಶ್ಶಕ್ತಗೊಂಡು ದೃಷ್ಟಿ ಮಂದವಾಯಿತು. ಅಂಥದರಲ್ಲಿಯೂ ಗ್ರಂಥದ ೬೦% ಭಾಗದ ಅಚ್ಚಿನ ಕರಡುಗಳನ್ನು ತಿದ್ದಿದರು. ಆ ಮುದ್ರಣವೆಂದರೆ ೧೨ ಪ್ಯೊಂಟಿನ ಮೊಳೆಗಳನ್ನೆ ಉದ್ದಕ್ಕೂ ಜೋಡಿಸುವ ಕೆಲಸವಾಗಿರಲಿಲ್ಲ. ಅದಕ್ಕಿಂತ ಸಣ್ಣ ಗಾತ್ರದ ಮೊಳೆಗಳನ್ನು ಹಿಡಿದು ವಿವಿಧ ಗಾತ್ರದ ಮೊಳೆಗಳನ್ನು, ಸಂಕ್ಷೇಪಾಕ್ಷರ ಸಂಜ್ಞೆಗಳನ್ನು, ಅವಗ್ರಹ ಚಿಹ್ನ ಮುಂತಾದವನ್ನು ಈ ಕೋಶಕ್ಕೆಂದೇ ಬಾಸೆಲ್ ಮಿಶನ್ನಿನವರು ಸಿದ್ಧಪಡಿಸಿದ್ದರು. ಸಾಲದ್ದಕ್ಕೆ ಮುದ್ರಣ ಕಾರ್ಯವು

ಮಂಗಳೂರಲ್ಲಿ, ಕಿಟೆಲರು ತಮ್ಮ ಊರಾದ ಟೂಬಿಂಗೆನ್‌ನಲ್ಲಿ. ಈ ತಾಪತ್ರಯಗಳೇನೆ ಇದ್ದರೂ ಕೋಶವನ್ನು ಪರಾಮರ್ಶಿಸಿದಾಗ ಸಾಮಾನ್ಯವಾಗಿ ದೋಷಗಳೇನೂ ತೋರುವುದಿಲ್ಲ. ಆದರೆ ಕಿಟೆಲರ ದೃಷ್ಟಿ ಮಾಂದ್ಯದ ಕಣ್ಣಿಗೇನೆ ಅಲ್ಲಲ್ಲಿ ಕಂಡಿವೆ. ಒಂದೆಡೆ ಕೇವಲ ಒಂದು ಪೂರ್ಣ ವಿರಾಮ ಚಿಹ್ನೆ ಕೂಡದ್ದಕ್ಕಾಗಿ ಪರಿತಪಿಸಿದ್ದಾರೆ. ಪ್ರಸ್ತಾವನೆಯಲ್ಲಿ ಹೀಗೆ ಅದನ್ನು ಕಾಣಿಸಿದ್ದಾರೆ.

ವಿಸ್ಫುಲಿಂಗ : A spark of fire 2. A sort of poison (bp. 53, 52)

ಈ ಶಬ್ದ ಬರುತ್ತದೆ. ಈ ಶಬ್ದಕ್ಕೆ ೨ ಅರ್ಥಗಳಿದ್ದು, ಬಸವ ಪುರಾಣದ (ಬಿಪಿ) ೫೩ ಮತ್ತು ೫೨ ನೆಯ ಪದ್ಯಗಳಲ್ಲಿ ಅದು ಪ್ರಯೋಗವಾಗಿದೆ ಎಂದು ಈಗಿದ್ದಂತೆ ಬೋಧೆಯಾಗುತ್ತದೆ. ಎಂದರೆ ಆ ಎರಡೂ ಅರ್ಥಗಳಲ್ಲಿ ಬಸವಪುರಾಣದಲ್ಲಿ ಬಂದಿದೆ ಎಂದು ಹೇಳಬೇಕಾಗುತ್ತದೆ. ಅದು ನಿಜವಲ್ಲ. ಎರಡನೆಯ ಅರ್ಥದಲ್ಲಿ ಮಾತ್ರ ಬ. ಪು. ದಲ್ಲಿ ಪ್ರಯೋಗವಾಗಿದೆ. ಈ ತಪ್ಪು ಅಭಿಪ್ರಾಯಕ್ಕೆ ಕಾರಣ, ಮೊದಲಿನ ಅರ್ಥದ fire ಶಬ್ದವಾದೊಡನೆ ಅಲ್ಲಿ ಒಂದು ಪೂರ್ಣ ವಿರಾಮ ಚಿಹ್ನೆ ಕೊಡುವುದು ಉಳಿಯಿತಂತೆ ! ಇಷ್ಟೊಂದು ಸೂಕ್ಷ್ಮ ಗಮನವಿತ್ತದ್ದರಿಂದಲೇ ಕೋಶವು ಪ್ರಾಮಾಣ್ಯವೆನಿಸಿತು. •

ಕೋಶದ ಮುದ್ರಣ ಕೊನೆಗೊಮ್ಮೆ ಮುಗಿಯಿತು. ಇನ್ನು ಅದರ ಬೈಂಡಿಂಗ್ ಆಗಬೇಕು. ಅದರ ಮುದ್ರಣಕ್ಕೆಂದು ಬ್ರಿಟಿಷ್ ಸರಕಾರದವರು

• ಕ್ರಿ.ಶ. ೧೯೭೩ರಿಂದ ಆರಂಭಿಸಿ ಕನ್ನಡ ಸಾಹಿತ್ಯ ಪರಿಷತ್ತು ಬೃಹತ್ ಕನ್ನಡ - ಕನ್ನಡ ಕೋಶವನ್ನು ಸಿದ್ಧಪಡಿಸಿ ಈಚೆಗೆ ಹೊರತಂದಿದೆ. ಅದರ ಸಂಪಾದಕ ಮಂಡಲಿಯ ವಿದ್ವಾಂಸರು, ಪ್ರಯೋಗ ವಾಕ್ಯಗಳು ಲಭ್ಯವಿಲ್ಲದಂಥ ಶಬ್ದಗಳ ಅರ್ಥವನ್ನು ಕಿಟೆಲ್‌ರು ಹೇಳಿದ್ದಂತೆಯೆ ಸ್ವೀಕರಿಸಿದ್ದಾಗಿಯೂ, ಅದರಂತೆ ಕನ್ನಡ ಕಾವ್ಯಗಳಲ್ಲಿ ಬಂದ ಸಂಸ್ಕೃತ ಶಬ್ದಗಳನ್ನು ಕಿಟೆಲರಿಂದ ನೇರವಾಗಿ ಸ್ವೀಕರಿಸಿದ್ದಾಗಿಯೂ ಹೇಳಿದ್ದಾರೆ. ಕಿಟೆಲ್ ಕೋಶದ ಪ್ರಾಮಾಣ್ಯತೆಯ ಮನ್ನಣೆಗೆ ಇದೊಂದು ನಿದರ್ಶನ.

ನೆರವಾಗಿದ್ದರಷ್ಟೆ. ಆ ಬೃಹದ್ಗಾತ್ರದ ಗ್ರಂಥದ ಬೈಂಡಿಂಗಿನ ವೆಚ್ಚ ಬಹಳ ಆಗುವುದೆಂದು ಮಿಶನ್ನಿನವರು ವಿವರಣೆಯನ್ನು ಕೊಟ್ಟು ೫೬ ಪೌಂಡುಗಳಷ್ಟು ಹಣವನ್ನು ಯಾಚಿಸಿದರು. ಅದಕ್ಕೆ ಬ್ರಿಟಿಷ್ ಸರಕಾರದವರು ಕೊಟ್ಟ ಉತ್ತರ (ದಿ. ೧೧.೩.೧೮೫೬) ಅವರ ವ್ಯಾವಹಾರಿಕ ಬುದ್ಧಿಗೆ ಕನ್ನಡಿ ಹಿಡಿದಂತಿದೆ.

With regard to your application for extra payment on account of binding... the claim (is) inadmissible, as it was certainly not contemplated by this office at the time of making the grant that the copies would be supplied unbound.

ಕ್ರಿ.ಶ. ೧೮೯೪ರಲ್ಲಿ ಗ್ರಂಥವು ಹೊರಬಂದೊಡನೆ ಅದಕ್ಕೆ ತಡವಿಲ್ಲದೆ ಅಖಿಲ ಭಾರತ ಮನ್ನಣೆ ದೊರಕಿತು. ಗ್ರಂಥ ವಿಮರ್ಶೆಯ ರೂಪದಲ್ಲಿಯೂ ಹೊಗಳಿಕೆಯ ಮೇಲೆ ಹೊಗಳಿಕೆ ! ಆ ಮೂಲಕ ಕನ್ನಡ ಭಾಷೆಯ ಸ್ಥಾನಮಾನವೂ ಎತ್ತರಕ್ಕೇರಿತು. ಇದೇ ಮಾದರಿಯ ಕೋಶವನ್ನು ಗುಂಡರ್ಟ್ ಮಲೆಯಾಳೀ ಭಾಷೆಗೆ ರಚಿಸಿದ್ದಾದರೂ, ಕಿಟೆಲ್ ಕೋಶವು ತನ್ನ ವ್ಯಾಪ್ತಿಯಲ್ಲಿ ಮತ್ತು ವೈದುಷ್ಯದಲ್ಲಿ ಅದನ್ನು ಮೀರಿಸಿದೆ ಎಂದು ಆಗಿನ ವಿದ್ವಾಂಸರ ಅಭಿಪ್ರಾಯವಿದ್ದಿತು. ಟ್ಯೂಬಿಂಗೆನ್ ವಿಶ್ವವಿದ್ಯಾಲಯವು ಅವರಿಗೆ ಗೌರವ ಪಿಎಚ್.ಡಿ ಪದವಿಯನ್ನು ನೀಡಿ ಗೌರವಿಸಿತಷ್ಟೆ. ಕನ್ನಡದ ಕೃತಿಗಾಗಿ ವಿದೇಶದ ವಿಶ್ವವಿದ್ಯಾಲಯವೊಂದು ಗೌರವ ಡಾಕ್ಟರೇಟ್ ನೀಡಿದ್ದು ಹೆಮ್ಮೆಯ ವಿಷಯ.

ಕಿಟೆಲ್ ಕೋಶವು ದೋಷರಹಿತವೆಂದೇನೂ ಅಲ್ಲ. ಸ್ವತಹ ಕಿಟೆಲರಿಗೆ ಅಂಥ ಲೋಪ ದೋಷಗಳ ಅರಿವಿದ್ದಿತು. ಹಾಗೆಂದು ತಮ್ಮ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಫ್ಲೀಟ್ ಅದರ ವಿಮರ್ಶೆ ಮಾಡುವಾಗ, ಅದರಲ್ಲಿಯ cross references ತಲೆಬೇನೆ ತರುವಂತಿವೆ ಎಂಬ ಮಾತನ್ನು ಕಾಣಿಸಿದ್ದಾರೆ. ಆದರೆ ವಿದ್ವಾಂಸರು 'ದೋಷ'ಗಳಿಗಿಂತ 'ಲೋಪ'ಗಳನ್ನು ತೋರಿಸಿದ್ದುದೇ ಹೆಚ್ಚು. ಇತ್ತ ಕನ್ನಡಿಗ ವಿಮರ್ಶಕರಲ್ಲಿ ಆರ್.

ರಘುನಾಥರಾಯರದ್ದು ಗಮನಿಸುವಂತಿದೆ. ಗಂಡ ಎಂಬುದಕ್ಕೆ ಕುತ್ತ ಎಂಬ ಅರ್ಥವೂ ಇದ್ದು ಅದನ್ನು ಕಿಟೆಲರು ಕೊಟ್ಟಿಲ್ಲ ಎಂದಿದ್ದಾರೆ. ಮಕ್ಕಳು ಎನ್ನುವಲ್ಲಿ ಅದು ಜಾತಿವಾಚಕವೂ ಆಗುವುದು, (ಒಕ್ಕಲು ಮಕ್ಕಳು) ಅದನ್ನು ಕಿಟೆಲರು ಹೇಳಿಲ್ಲ ಎಂದಿದ್ದಾರೆ. ಹೀಗೆಯೇ ಹಲವಾರು ತಪ್ಪುಗಳನ್ನು ಎತ್ತಿ ತೋರಿದ್ದಲ್ಲದೆ, 'ಕೋಶವು ಗ್ರಾಮ್ಯ ಪದಗಳಿಂದ ತುಂಬಿ ಹೋಗಿದೆ' 'ಯಾವುದೇ ಶಾಸ್ತ್ರಾಭ್ಯಾಸಕ್ಕೆ ಅನುಕೂಲಿಸುವುದಿಲ್ಲ' ಎಂದುದಲ್ಲದೆ ಕೊನೆಯಲ್ಲಿ ಕಿಟೆಲ್ ಸಾಹೇಬರವರ ನಿಘಂಟುವಿನ ಸಹಾಯದಿಂದ ಕನ್ನಡದ ಸಾಧಾರಣ ಪದ್ಯಕ್ಕೂ ಅರ್ಥ ಮಾಡಲಿಕ್ಕಾಗುವುದಿಲ್ಲ ಎಂದು ಫಲಶ್ರುತಿ ಮಾಡಿದ್ದಾರೆ. ಅದು ದುಡುಕಿನ ನಿರ್ಣಯ ಎಂಬುದು ಸ್ಪಷ್ಟ.

ಕಿಟೆಲ್ ಮರಣಾನಂತರ ಅನೇಕ ಹಳಗನ್ನಡ ಕಾವ್ಯಗಳ ಹಸ್ತಪ್ರತಿ ದೊರಕಿದುವು. ಅವುಗಳಲ್ಲಿಯ ಶಬ್ದಗಳನ್ನೂ ಸೇರಿಸಿ ಕಿಟೆಲ್ ಮೂಲದಲ್ಲಿ ಏನೂ ಬದಲಾವಣೆ ಮಾಡದೆ ಎಂ. ಮರಿಯಪ್ಪಭಟ್ಟರು ಮದ್ರಾಸ ವಿಶ್ವವಿದ್ಯಾಲಯದ ವತಿಯಿಂದ ಈ ವಿಸ್ತಾರಿತ ಆವೃತ್ತವನ್ನು ಹೊರತಂದಿದ್ದಾರೆ. (೧೯೬೮-೧೯೭೧)

ಕಿಟೆಲ್ ಶಬ್ದವೊಂದನ್ನು ಯಾವ ಯಾವ ನಿಟ್ಟಿನಲ್ಲಿ ನಿರೀಕ್ಷಿಸಿ ವಿವರಗಳನ್ನು ಒದಗಿಸುತ್ತಿದ್ದರು - ಎಂಬುದನ್ನು ಅರಿಯಲೋಸುಗ 'ಕೆಯ್' ಎಂಬ ಶಬ್ದದ ಅಂಗಗಳ ಸಹಿತವಾಗಿ ಅಂಥ ವಿವರಗಳನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

(ಆಕರ : ಡಾ. ಕೆ. ಎಂ. ಮ್ಯಾಥ್ಯೂ ಅವರ 'ರೆ। ಎಫ್. ಕಿಟೆಲ್ ಒಂದು ಸಮಗ್ರ ಅಧ್ಯಯನ')

೧. ಶಬ್ದ	**ಕೆಯ್**
೨. ಧ್ವನಿಲಿಪಿ	- Key
೩. ಉಚ್ಚಾರಭೇದ	- ಕೆಯ್ಯಿ, ಕೈ, ಕೈಯಿ, ಕೈಯ್ಯಿ

೪. ಪ್ರಧಾನ ಅರ್ಥ - The hand

೫. ಇತರ ಶಬ್ದಾರ್ಥ - The fore-arm

೬. ಸಂಬಂಧಾರ್ಥಗಳು
- An elephant's trunk
- The branch of [redacted] tree
- a staff
- a pole
- [redacted] handle
- a key
- Means
- Instrumentality
- Handiness
- Smallness

೭. ಇತರ ಕೋಶಗಳ ಸಮಾನ ಶಬ್ದಗಳು

– ಕರ, ಹಸ್ತ (ನಾನಾರ್ಥ ರತ್ನಾಕರ)

ತಳ, ತಲ- (ಕಬ್ಬಿಗರ ಕೈಪಿಡಿ, ಶಬ್ದಮಂಜರಿ)

೮. ಜ್ಞಾತಿ ಶಬ್ದಗಳು
– ಕೈ – ತಮಿಳು
– ಕೈ – ತುಳು
– ಕಯ್ಯಿ, ಕೈಯಿ–ಮಲಯಾಳಂ
– ಕಯಿ, ಕಯ್ಯಿ – ಚೆಯಿ, ಚೆಯ್ಯಿ – ತೆಲುಗು.

೯. ಪ್ರಯೋಗಗಳು – ಹಳಗನ್ನಡ ನಿಘಂಟುಗಳಿಂದ.
- ಎತ್ತಿದ ಕೆಯ್ಯೊಳ್ ಮುತ್ತಿದಂ (ಶಬ್ದಮಣಿದರ್ಪಣ)
- ಕೆಯ್ ಕಾಲ್ ಇಲ್ಲದವನು
- ಕೆಯ್ಯ ಕಾಲ ಎಲ್ವು, (ಹಲಾಯುಧ)
- ಕೆಯ್ಯ ಕಜ್ಜ ಹಗೆಯ ಕೆಯ್ಯಲ್ಲಿ ಪಿಡಿದವನು (ಪುರಸ್ಕೃತ)
- ಆನೆಯ ಕೆಯಿನ್ನ ಸುರಿಯುವ ಶೀಕರವು – (ಜಿ. ನಾಚಿರಾಜೀಯ)
- ಕೆಯ್ಯ ಬಗಸೆ – (ನಾನಾರ್ಥ ರತ್ನಾಕರ)
- ಸುರಿಗೆ ಮೊದಲಾದುದು ಕೆಯ್ಯಿಂ ಬಿಡಲ್ ಬಾರದು
- ಆನೆಯ ಕೆಯ್ಯ ತುನ್ತುರ್ಬನಿ
- ಆನೆಯ ಕೆಯ್ (ಹಲಾಯುಧ)

೧೦. ಪ್ರಯೋಗ – ಹಳಗನ್ನಡ, ನಡುಗನ್ನಡ, ಕೃತಿಗಳಲ್ಲಿ – ಅಂಗೆಯ್
– ಮುಂಗೆಯ್ ಮೇಗೆಯ್ ಮೊಣಕೈ, ಇತ್ಯಾದಿ.
– ಪಂಪ ರಾಮಾಯಣ, ಬಸವಪುರಾಣ, ದಾಸರಪದ, ರಾಜಶೇಖರವಿಳಾಸ, ಕುಮಾರವ್ಯಾಸಭಾರತಗಳಲ್ಲಿ.

೧೧. ಗಾದೆಮಾತು – ಕೆಯ್ ತೋರಿಸಿ ಅವಲಕ್ಷಣ ಅನ್ನಿಸಿಕೊಣ್ಡ ಹಾಗೆ.

ಬೈಬಲ್ ಅನುವಾದ ಟಿಪ್ಪಣಿ

ಬಾಲ್ಯಕಾಲದಿಂದಲೂ ಕಿಟೆಲ್‌ರಿಗೆ ಬೈಬಲ್ ಸಂಸ್ಕಾರ ಇದ್ದುದೇ. ತಮ್ಮ ಬರಹಗಳಲ್ಲಿ ಅವರು ಈ ಮೂರು ರೀತಿಯಲ್ಲಿ ಬೈಬಲಿನ ಪ್ರಕ್ರಿಯೆಗಳನ್ನು ತಂದಿದ್ದಾರೆ.

ಒಂದು - ಬೈಬಲಿನ ಕಥಾಂಶಗಳನ್ನು, ವಿಶೇಷತಃ ಯೇಸುವಿನ ಚರಿತ್ರೆಯನ್ನು ನೇರವಾಗಿ ನಿರೂಪಿಸುವುದು.

ಇನ್ನೊಂದು - ತಮ್ಮ ಬೇರೆ ವಿಚಾರಗಳ ಮಂಡನೆಯಲ್ಲಿ, ಬೈಬಲಿನ ಸಂದರ್ಭ ಇಲ್ಲವೆ ಆಧಾರವನ್ನು ಕೊಡುವುದು.

ಮತ್ತೊಂದು - ಬೈಬಲಿನ ಕನ್ನಡಾನುವಾದದಲ್ಲಿ ಪಾಲ್ಗೊಳ್ಳುವುದು.

ಮೊದಲನೆಯ ಕ್ರಮಕ್ಕೆ ಅವರ ಯೇಸುಕ್ರಿಸ್ತನ ಶ್ರಮೇಚರಿತ್ರೆ ಮುಂತಾದವು ನಿದರ್ಶನಗಳಾಗಿವೆ. ಅಂದ ಹಾಗೆ ಕಿಟೆಲ್ಲರು ಕೊಡವ ಭಾಷೆಯಲ್ಲಿ The parable of the sower ಎಂಬ ಚಿಕ್ಕ ಕೃತಿಯನ್ನು ರಚಿಸಿದ್ದುಂಟು. ಇತ್ತ ಕ್ರೈಸ್ತ ಸಭಾಚರಿತ್ರ ಗ್ರಂಥದಲ್ಲಿ ಕ್ರಿಸ್ತ ಶಕದ ಮೊದಲಿನ ನೂರು ವರ್ಷಗಳೆಂದರೆ ಮತ್ತಾಯ, ಜಾನ್ ಮೊದಲಾದ ಸುವಾರ್ತಕರ ಚರಿತ್ರೆಯೇ (ಎಂದರೆ ಹೊಸ ಒಡಂಬಡಿಕೆ) ಬರುತ್ತದಲ್ಲವೆ.

ಎರಡನೆಯ ಕ್ರಮಕ್ಕೆ ಮಾದರಿಯೆಂದು 'ಪರಮಾತ್ಮಜ್ಞಾನ' ಇದನ್ನು ಉಲ್ಲೇಖಿಸಬಹುದು. ಈ ಕೃತಿಯ ಆಶಯ ದೇವರು ಮತ್ತು ಪಾಪ ಪುಣ್ಯ ವಿಚಾರ. ಕ್ರೈಸ್ತ ಪ್ರಣಾಲಿಯ ಪ್ರಕಾರ, ಪಾಪ ಪುಣ್ಯದ ಹೊರೆ ಆ ವ್ಯಕ್ತಿಗಳದೇ. ಅವರಿಗೆ ತಪ್ಪಿನ ಅರಿವಾದರೆ ದೇವರು ಕ್ಷಮಿಸುವನು. ಈ ತಪ್ಪಿನ ಅರಿವಾಗುವುದಕ್ಕೆ ದೇವರ ದೂತ (ಯೇಸು) ನೆರವಾಗುವನು. ಈ ವಿಚಾರವನ್ನು ಮಂಡಿಸುವಲ್ಲಿ ಕಿಟೆಲರು ಹೆಜ್ಜೆ ಹೆಜ್ಜೆಗೆ ಬೈಬಲಿನ ಆಧಾರ ಕೊಡುತ್ತಾರೆ.

ಇವೆರಡರಕ್ಕಿಂತ ಕಿಟೆಲರು ಬೈಬಲಿನ ಅನುವಾದದಲ್ಲಿ ಪಾಲ್ಗೊಂಡ ಬಗೆಯು ನಮಗೆ ಹೆಚ್ಚು ಪ್ರಸ್ತುತವಾದುದು. ಕನ್ನಡದಲ್ಲಿಯ ಬೈಬಲ್

ಅನುವಾದದ ಎತ್ತುಗಡೆಯಲ್ಲಿ ಮೂರು ಕಾಲಖಂಡಗಳನ್ನು ಗುರುತಿಸಬಹುದು. ೧೮೨೦-೧೮೪೦ರ ವರೆಗೆ ಪ್ರಾರಂಭದ ಪ್ರಯತ್ನಗಳು. ಇವು, ಇಂಗ್ಲೆಂಡಿನ King James ಆವೃತ್ತಿಯನ್ನು ಹೆಚ್ಚಾಗಿ ಅವಲಂಬಿಸಿದವುಗಳು. ಬಾಸೆಲ್ ಮಿಶನ್ನಿನವರು ಸೇರಿಕೊಂಡ ಮೇಲೆ ಬೈಬಲಿನ Greek ಮತ್ತು Hebrew ಆವೃತ್ತಿಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ಮುಂದಿನ ಎರಡು ದಶಕಗಳಲ್ಲಿ ಬೈಬಲ್ ನವೀಕರಣ ನಡೆದು ೧೮೬೦ ರ ಸುಮಾರಿಗೆ ಇಡೀ ಬೈಬಲಿನ ಕನ್ನಡಾನುವಾದ ಸಿದ್ಧವಾಯಿತು. ೧೮೯೧ನೆಯ ದಶಕದಲ್ಲಿ ಮತ್ತೊಂದು ಬಾರಿಗೆ ಬೈಬಲ್ ನವೀಕರಣ ನಡೆಯಿತು. ಹೆನ್ರಿ ಹೇಗ್ ಎಂಬಾತ ಅಧ್ಯಕ್ಷನಿದ್ದ ಆ ಸಮಿತಿಯಲ್ಲಿ ಏಳು ಜನ ಸದಸ್ಯರಿದ್ದರು. ಅವರು ಬೈಬಲಿನ ಹೊಸ ಒಡಂಬಡಿಕೆಯ ನವೀಕರಣದ ಕರಡು ಅನುವಾದದ ಪ್ರತಿಗಳನ್ನು ಕ್ರೈಸ್ತ ಸಮಾಜದ ಪ್ರಮುಖರಿಗೆ ಕಳಿಸಿಕೊಟ್ಟರು. ಅಂಥವರಲ್ಲಿ ಕಿಟೆಲರೂ ಒಬ್ಬರು . ಆ ವೇಳೆಗೆ ಕಿಟೆಲ್ ಕೋಶವು ಹೊರಬಂದಿತ್ತು. ಅವರು ಸ್ವಸ್ಥಳದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿದ್ದರು.

ಕಿಟೆಲರು ಸೂಚಿಸಿದ ಬದಲಾವಣೆಗಳ ಹಸ್ತ ಪ್ರತಿಯಲ್ಲಿ ಮಾಥ್ಯೂ ಹಾಗೂ ಜಾನ್ ಇವರಿಬ್ಬರ ಸುವಾರ್ತೆಗಳ ಪ್ರಸ್ತಾಪ ಮಾತ್ರ ಇದೆ.

ಕಿಟೆಲರು ಮಕ್ಷಿಕಾ ಮಕ್ಷಿ ಎಂದರೆ ಶಬ್ದಕ್ಕೆ ಪ್ರತಿಶಬ್ದದ ಅನುವಾದವನ್ನು ಸ್ಪಷ್ಟವಾಗಿ ವಿರೋಧಿಸಿದರು. ಸೇಂಟ್ ಜಾನನ ಸುವಾರ್ತಿಕದಲ್ಲಿ I say unto you truthfully truthfully ಎಂಬ ಮಾತು ಬರುತ್ತದೆ. ಅದರ ಅನುವಾದವನ್ನು ಹೇಗ್ ಸಮಿತಿಯು 'ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ' ಎಂದು ಅನುವಾದಿಸಿದೆ. Truthfully ಇದರ ಶಾಬ್ದಿಕ ಅನುವಾದ 'ನಿಜವಾಗಿ ' ಸರಿಯೇ. ಆದರೆ ಕಿಟೆಲರು ಮೂಲದ ಅವಧಾರಣೆಯನ್ನು ಉಳಿಸಿಕೊಂಡೇ 'ನಾನು ನಿಮಗೆ ಹೌದು ಹೌದೆಂದು ಹೇಳುತ್ತೇನೆ.' ಎಂಬುದನ್ನು ಸೂಚಿಸಿದ್ದರು.

ಇದೇ ಸುವಾರ್ತಿಕದಲ್ಲಿ ಬರುವ Mosaic law (liber officiorum) ಮೋಶೆಯ ಧರ್ಮಶಾಸ್ತ್ರ ಎಂದು ಅನುವಾದಿಸಲಾಗಿದೆ. ಆದರೆ ಧರ್ಮಶಾಸ್ತ್ರ

ಎಂದೊಡನೆ ಭಾರತೀಯನಿಗೆ ತನ್ನ ಧರ್ಮಶಾಸ್ತ್ರ ನಿಯಮಗಳ ಕಲ್ಪನೆ ಬರುತ್ತದೆ. ಅರ್ಥಾತ್ ಅದೊಂದು ವಿಶಿಷ್ಟ ಅರ್ಥದ ಪಾರಿಭಾಷಿಕ. ಬದಲಾಗಿ 'ನ್ಯಾಯ ಪ್ರಮಾಣ' ಶಬ್ದವನ್ನು ಪ್ರಯೋಗಿಸಬಹುದೆಂದು ಕಿಟೆಲ್ ಸೂಚಿಸಿದ್ದಾರೆ. ಇದೇ ಕಾರಣದಿಂದ ಪರಲೋಕ ಎಂಬ ವಿಶಿಷ್ಟಾರ್ಥದ ಭಾರತೀಯ ಶಬ್ದಕ್ಕೆ ಬದಲಾಗಿ ಮೇಲ್ಲೋಕ ಎಂಬುದನ್ನು ಸೂಚಿಸಿದ್ದರು.

Spirit - ಆತ್ಮ ಎನ್ನುವುದು ಕ್ರೈಸ್ತ ಧರ್ಮ ವಿಚಾರದಲ್ಲಿ ಮೇಲಿಂದ ಮೇಲೆ ಬಳಕೆಯಾಗುವ ಪದ. ಆತ್ಮವು ಅಥವಾ ಆತ್ಮನು - ಯಾವುದು ಸರಿ ? Holy spirit ಇದನ್ನು ಪವಿತ್ರಾತ್ಮವು ಎಂದು ಅನುವಾದಿಸಿದ್ದರ ಬಗ್ಗೆ ಕಿಟಲ್ ಹೀಗೆ ಹೇಳುತ್ತಾರೆ.

With regard to Canerese ಪವಿತ್ರಾತ್ಮವು which the revisers use in v.33. the writer (ie. Kittel) remarks that it can only mean a pure mind. ಪವಿತ್ರಾತ್ಮನು therefore, can without any hesitation be used.

ಈ ಅಂಶವನ್ನು ಸ್ಪಷ್ಟಗೊಳಿಸಲು ಕಿಟೆಲರು ಇಡೀ 'ಅನುಭವಾಮೃತ' ಕಾವ್ಯವನ್ನು (ಮಹಲಿಂಗರಂಗ ವಿರಚಿತ) ಅದೂ ಎರಡು ಬೇರೆ ಪ್ರತಿಗಳನ್ನು ಪರಿಶೀಲಿಸಿದ್ದರು! ಅದರಲ್ಲಿ ಆತ್ಮ ಶಬ್ದವು, ೮೫ ಬಾರಿ ಬಂದಿದೆಯೆಂದೂ ಜೀವಾತ್ಮ ಪ್ರತ್ಯಗಾತ್ಮ ಸತ್ಯಾತ್ಮ ಸರ್ವಾತ್ಮ ಮಂಗಳಾತ್ಮ ಮುಂತಾದ ವಿವಿಧ ರೂಪಗಳಲ್ಲಿ ಆತ್ಮ ಶಬ್ದವು ಬಂದಿದ್ದು, ಅದು ಪುಲ್ಲಿಂಗವಾಚಿ ಶಬ್ದವಾಗಿದೆಯೆಂಬ ವಿವರಣೆ ಕೊಟ್ಟಿದ್ದಾರೆ. ! ಯಾವುದೇ ವಿಷಯವಿರಲಿ ಕಿಟೆಲ್ ಅತ್ಯಂತ ಆಳಕ್ಕೆ ಇಳಿಯುತ್ತಿದ್ದರೆಂಬುದರಲ್ಲಿ ಸಂಶಯವೇ ಇಲ್ಲ.

ಹೇಗ್ ಸಮಿತಿಯು ೧೯೦೦ ರ ದಶಕದ ಆರಂಭದಲ್ಲಿ ಹೊಸ ಒಡಂಬಡಿಕೆ ಸುಧಾರಿತ ಆವೃತ್ತಿಯನ್ನು ಹೊರತಂದಿತು. ಆದರೇನು, ಕಿಟೆಲರು ಸಕಾರಣವಾಗಿ ಮಾಡಿದ್ದ ಯಾವೊಂದು ಸೂಚನೆಯೂ ಅನುಷ್ಠಾನದಲ್ಲಿ ಬಂದಂತಿಲ್ಲ ! ಪ್ರಾಯಶಃ ಅವರ ಸೂಚನೆಗಳು ದೂರದ

ಜರ್ಮನಿಯಿಂದ ಬರುವಷ್ಟರಲ್ಲಿ ಸುಧಾರಣಾ ಸಮಿತಿಯು ನಿರ್ಣಯ ತೆಗೆದುಕೊಂಡು ಮುಗಿಸಿರಬೇಕು.

ಕನ್ನಡದ ಪ್ರೌಢ ವ್ಯಾಕರಣ

ಆದರೆ ಅವರ ಮರಣದ ವರ್ಷ A Grammar of the Kannada language ಎಂಬ ಉದ್ಗ್ರಂಥ ಪ್ರಕಟವಾಯಿತು. ಆ ಇಳಿ ವಯಸ್ಸಿನಲ್ಲಿ ಅತ್ಯಂತ ಪ್ರಗಲ್ಭವಾದ ಪ್ರೌಢ ವ್ಯಾಕರಣವನ್ನು ಬರೆದದ್ದಾದರೂ ಹೇಗೆ ಎಂದು ನನಗೆ ಅಚ್ಚರಿ. ಫ್ಲೀಟರು ಕೋಶವನ್ನು IA ಪತ್ರಿಕೆಯಲ್ಲಿ ವಿಮರ್ಶಿಸುವಾಗ ಕನ್ನಡ ವ್ಯಾಕರಣ ಗ್ರಂಥವನ್ನು ಕಿಟೆಲರು ರಚಿಸಬೇಕು ಎಂದು ಸೂಚಿಸಿದ್ದುದೇನೆ ನಿಜ. ಆದರೆ ಅದಕ್ಕೆ ಬೇಕಾದ ಟಿಪ್ಪಣಿ ಕಿಟೆಲರು ಮುಂಚೆಯೇ ಮಾಡಿಟ್ಟುಕೊಂಡಿರಬೇಕು. ಅದರಲ್ಲಿ ಬಂದಿರುವ ಅಸಂಖ್ಯಾತ ಶಬ್ದ, ವಾಕ್ಯಗಳ ಪ್ರಯೋಗಗಳ ಮೂಲಕ ಕಿಟೆಲ್ ಕನ್ನಡ ಭಾಷೆಯ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರು ಅವಸ್ಥೆಯ ಪ್ರಕ್ರಿಯೆಗಳನ್ನು ವಿಶದೀಕರಿಸಿದ್ದಾರೆ. ಕೋಶದ ವಿಮರ್ಶೆ ಮಾಡುವಾಗ, ಫ್ಲೀಟ್ ಶಾಸನಗಳಲ್ಲಿ ಬಂದಿರುವ ಪದಗಳನ್ನೂ ಗಮನಿಸಬೇಕು ಎಂದಿದ್ದರು. ಇಲ್ಲಿ ಅವುಗಳಿಗೂ ಇಂಬು ದೊರೆತಿದೆ. ಇತರ ದ್ರಾವಿಡ ಭಾಷೆಗಳಲ್ಲಿಯ ಸಮಾನ ಅಂಶಗಳನ್ನೂ ತೌಲನಿಕವಾಗಿ ತಂದಿದ್ದಾರೆ.

ಈ ವರ್ಣನಾತ್ಮಕ ವ್ಯಾಕರಣಕ್ಕೆ (descriptive philology) ಕೇಶಿರಾಜನ ಶಬ್ದ ಮಣಿದರ್ಪಣವೇ ತಳಹದಿಯಾಗಿದೆ. ಅದರಲ್ಲಿದ್ದಂತೆಯೇ ಇಲ್ಲಿಯೂ ಪ್ರಕರಣ ವಿಭಾಗಗಳನ್ನು ಕಿಟೆಲ್ ಮಾಡಿಕೊಂಡಿದ್ದಾರೆ. ಮತ್ತು ಹಳಗನ್ನಡ ವಿಚಾರದಲ್ಲಿ ಅವನ ನಿಯಮಗಳನ್ನೂ ಪ್ರಯೋಗಗಳನ್ನೂ ಉಳಿಸಿಕೊಂಡರೂ, ಮುಂದಿನ ಕಾಲದ ವ್ಯಾಕರಣದ ಪ್ರಕ್ರಿಯೆಗಳಿಗೆ ತಮ್ಮದೇ ಉದಾಹರಣೆಗಳನ್ನು ಕೊಟ್ಟು ವಿವರಣೆ ನೀಡಿದ್ದಾರೆ. ಅಪೂರ್ವವಾದ, ಮೌಲಿಕವಾದ ಕೃತಿ ಇದಾಗಿದ್ದರೂ ಈ ಗ್ರಂಥವನ್ನು ಕನ್ನಡ ಪ್ರಾಧ್ಯಾಪಕರು ಗಮನಿಸಿದಂತಿಲ್ಲ. ಕಿಟೆಲರ ವಿದ್ವತ್ಸಾಧನೆಗೆ ನಾವು ಕೋಶದಷ್ಟೇ ಇದಕ್ಕೂ ಮನ್ನಣೆ

ಕೊಡಬೇಕಾಗುತ್ತದೆ. ಒಂದು ಗೌರೀಶಂಕರ ಶಿಖರವಾದರೆ, ಇನ್ನೊಂದು ಕಾಂಚನಗಂಗಾ ಎನ್ನಬಹುದು.

ಅಂದ ಹಾಗೆ ಈ ಕೃತಿಯ ಪ್ರಕಟನೆಯಲ್ಲಿಯೂ ಆಗಿನ ಬ್ರಿಟಿಷ್ ಸರಕಾರವು ಆರ್ಥಿಕ ಸಹಾಯವನ್ನು ನೀಡಿದೆ. ಆದರೆ ಪರೋಕ್ಷವಾಗಿ ! ಅರ್ಥಾತ್ ಇಲ್ಲಿಯ ಮದ್ರಾಸ್, ಮೈಸೂರು, ಮುಂಬಯಿ, ಮತ್ತು ಹೈದರಾಬಾದ ಸರಕಾರಗಳಿಗೆ ಪ್ರತಿಗಳನ್ನು ಕೊಳ್ಳಲು ಆದೇಶ ನೀಡಿದ್ದಿತು, ಅಷ್ಟೇ.

ಸಮಾರೋಪ

ಇಂತಿದು ಕಿಟೆಲರ ಹಾಗೂ ಅವರ ಸಾಧನೆಯ ಸಂಕ್ಷೇಪದ ಇತಿವೃತ್ತ. "ಅನ್ಯ ಪ್ರದೇಶಗಳಿಗೆ ಹೋಗು, ಯೇಸುವಿನ ಸಂದೇಶವನ್ನು ಸಾರು" ಎಂಬ ಬೈಬಲಿನ ಆದೇಶದ ಪ್ರಕಾರ ಕಿಟೆಲ್ ಕರ್ನಾಟಕಕ್ಕೆ ಬಂದರು. ಅರ್ಧ ಶತಮಾನದ ವರೆಗೆ ಕನ್ನಡಕ್ಕಾಗಿ ಶ್ರಮಿಸಿದರು. ಕನ್ನಡ ಎನ್ನುವ ಪರಿಕಲ್ಪನೆ ಬಳಕೆಯಲ್ಲಿ ಇರುವ ವರೆಗೂ ಕಿಟೆಲ್ ಎಂಬ ಹೆಸರು ಜೊತೆಯಾಗಿ ನಿಲ್ಲತಕ್ಕದ್ದೇ ಆಗಿದೆ.

ಸ್ಲ್ಯಾಟರ್ ಎಂಬಾತ ಐದು ಸಂಪುಟಗಳಲ್ಲಿ ಬಾಸೆಲ್ ಮಿಶನ್ನಿನ ಮತ್ತಿತರ ಸಮಾನ ಸಂಸ್ಥೆಗಳ ವಿಸ್ತೃತ ಚರಿತ್ರೆ ಬರೆದಿದ್ದಾನೆ. ಅದರಲ್ಲಿ ಕರ್ನಾಟಕಕ್ಕೆ ಬಂದು ಕೆಲಸ ಮಾಡಿದವರ ೮-೧೦ ಮಿಶನರಿಗಳನ್ನು ಪ್ರಸ್ತಾಪಿಸಿದ್ದಾನೆ. ಇಬ್ಬರು ದೇಶೀಯರೂ ಇದ್ದಾರೆ. ಆದರೆ ರೆವರೆಂಡ್ ಕಿಟೆಲ್ಲರ ಹೆಸರಿಲ್ಲ!

ಬಿಡಲಿ. ನಾವು ಕನ್ನಡಿಗರು ಡಾಕ್ಟರ್ ಕಿಟೆಲ್‌ರನ್ನು ಇಂದಿಗೂ, ಎಂದೆಂದಿಗೂ ಹೃತ್ಪೂರ್ವಕವಾಗಿ ನೆನೆಯುತ್ತಿದ್ದೇವೆ. ಸಾಕಲ್ಲ!

○

ರೆ। ಎಫ್. ಕಿಟೆಲ್ ಪ್ರತಿಮಾ ಸಮಿತಿ, ಬೆಂಗಳೂರು

ಡಾ. ಜಿ. ಎಸ್. ಶಿವರುದ್ರಪ್ಪ	ಗೌರವಾಧ್ಯಕ್ಷರು
ಪೂಜ್ಯ ಬಿಷಪ್, ಎಸ್. ವಸಂತ ಕುಮಾರ್	ಕಾರ್ಯಾಧ್ಯಕ್ಷರು
ಪೂಜ್ಯ ಬಿಷಪ್ ಸಿ. ಎಲ್. ಫರ್ಟಾಡೊ	ಉಪಾಧ್ಯಕ್ಷರು
ಪೂಜ್ಯ ಬಿಷಪ್ ಡಾ.ಪಿ.ಜೆ.ಕೆ. ಬಲ್ಮಿ	– ” –
ಫಾ। ಅಂತಪ್ಪ	– ” –
ಪ್ರೊ. ಎಲ್. ಎಸ್. ಶೇಷಗಿರಿ ರಾವ್	– ” –
ಡಾ. ಶ್ರೀನಿವಾಸ ಹಾವನೂರ	– ” –
ಡಾ. ಚಿದಾನಂದ ಮೂರ್ತಿ	– ” –
ಶ್ರೀ ಜೆ. ಆರ್. ಪೆರೇರ	– ” –
ಡಾ. ಎ. ಎಬಿನೇಜರ್	ಕಾರ್ಯದರ್ಶಿಗಳು
ಶ್ರೀ ಜೆ. ಎ. ರಾಯಲ್	– ” –
ಶ್ರೀ ಹೆನ್ರಿ ಎಫ್.ಎಸ್. ನೈಟ್	ಗೌ। ಖಜಾಂಚಿ
ಶ್ರೀ ರಫಾಯಲ್ ರಾಜ್	ಸಂಚಾಲಕರು
ಶ್ರೀ ಎಲ್. ರಾಜಪ್ಪ	– ” –
ಶ್ರೀ ಎ. ಆರೋಗ್ಯಸ್ವಾಮಿ	– ” –
ಶ್ರೀ ಜಿ. ನಾರಾಯಣ	ಸಲಹಾ ಸಮಿತಿ
ರೆ. ಡಾ. ಜೆ. ಎಸ್. ಸದಾನಂದ	– ” –
ಫಾ। ಅರುಳಪ್ಪ	– ” –
ಶ್ರೀ ಗೊ. ರು. ಚನ್ನಬಸಪ್ಪ	– ” –
ಶ್ರೀ ಸಿ. ಚಂದ್ರಶೇಖರ್	– ” –
ಪ್ರೊ. ಜಾನ್ ಎಸ್. ಕುರಿ	– ” –
ಡಾ. ಲೀಲಾವತಿ ದೇವದಾಸ್	– ” –
ವೆಂಕಟಾಚಲಪತಿ (ಶಿಲ್ಪಿಗಳು)	

* * *

A

KANNADA-ENGLISH

SCHOOL-DICTIONARY

CHIEFLY BASED ON THE LABOURS OF THE

REV. DR. F. KITTEL

BY THE

Rev. J. BUCHER.

ಕನ್ನಡ ಮತ್ತು ಇಂಗ್ಲಿಷ

ಶಾಲಾ ನಿಘಂಟು

MANGALORE
BASEL MISSION BOOK & TRACT DEPOSITORY
1899

ನಾಗವರ್ಮನ

ಕನ್ನಡ ಛಂದಸ್ಸು

NAGAVARMA'S

CANARESE PROSODY

EDITED WITH AN INTRODUCTION TO THE WORK AND AN ESSAY ON CANARESE LITERATURE

BY

REV. F. KITTEL

MANGALORE
BASEL MISSION BOOK & TRACT DEPOSITORY
LONDON TRÜBNER & Co. 1875 BASEL [illegible]

ಪರಮಾತ್ಮಜ್ಞಾನ

KNOWLEDGE

OF THE

SUPREME SPIRIT

A DIALOGUE ON THE HINDOO DOCTRINE OF GOD'S BEING THE AUTHOR OF SIN &

BY

THE REV. F. K

MANGALORE
PFLEIDERER & RIEHM, MISSION BOOKSHOP AND GOVT SCHOOLBOOK DEPOT
1862

ಕೇಶಿರಾಜಕವಿಯ

ಶಬ್ದಮಣಿದರ್ಪಣಂ

ನಿಷ್ಠೂರಸಂಜಯ್ಯನ ವ್ಯಾಖ್ಯಾನಂ ಸಹಿತಮಾದುದು

KESIRĀJA'S

JEWEL MIRROR OF GRAMMAR

WITH

THE COMMENTARY OF NISHṬHŪRASANJAYYA

[illegible]

MANGALORE
PUBLISHED BY C. STOLZ
BASEL MISSION BOOK & TRACT DEPOSITORY
1872

A

KANNAḌA-ENGLISH

SCHOOL-DICTIONARY

CHIEFLY BASED ON THE LABOURS OF THE

REV. DR. F. KITTEL

BY THE

Rev. J. BUCHER.

ಕನ್ನಡ ಮತ್ತು ಇಂಗ್ಲಿಷ

ಶಾಲಾನಿಘಂಟು

MANGALORE
BASEL MISSION BOOK & TRACT DEPOSITORY
1899

A

KANNADA-ENGLISH

DICTIONARY

BY

REV. F. KITTEL
B. G. E. M.

MANGALORE
BASEL MISSION BOOK & TRACT DEPOSITORY
1894

LONDON
LUZAC & Co.

BASEL
MISSIONSBUCHHANDLUNG

LEIPZIG
O. HARRASSOWITZ

Ueber

den Ursprung des Lingakultus

in Indien

von

F. Kittel,

MANGALORE
BASEL MISSION BOOK & TRACT DEPOSITORY
1876

LONDON
TRÜBNER & Co.

BASEL
MISSIONSBUCHHANDLUNG

KĀVYAMANJARI

FIRST BOOK

OF

CANARESE POETRY

WITH NOTES AND VOCABULARY

ಟೀಕೆಯೂ ನಿಘಂಟುವೂ ಸಹಿತವಾದ

ಕಾವ್ಯಮಂಜರಿ

ಕನ್ನಡದ ಕವಿಗಳ ಮೊದಲಿನ ಪುಸ್ತಕವು

MANGALORE
BOOK & TRACT DEPOSITORY
1877



ಕಿಟೆಲ್, ಕ್ರಿಸ್ತ, ಕನ್ನಡ ಮತ್ತು ಕೋಶ, ಇವು ನಾಲ್ಕೂ ಕ-ಕಾರದ ಶಬ್ದಗಳು. ಶಾಬ್ದಿಕವಾಗಿ ಅಲ್ಲದೆ, ಪರಸ್ಪರ ಸಂಬಂಧದಲ್ಲಿಯೂ ಇವುಗಳಲ್ಲಿ ಅನ್ಯೋನ್ಯತೆಯಿದೆ. ಕಿಟೆಲ್ ಕ್ರಿಸ್ತನ ಸಂದೇಶವನ್ನು ಸಾರುವುದಕ್ಕೆಂದು ಕರ್ನಾಟಕಕ್ಕೆ ಬಂದರು (೧೮೫೩). ಕನ್ನಡವನ್ನು ಆಳವಾಗಿ ಅಭ್ಯಸಿಸಿ ಗ್ರಂಥಸಂಪಾದನೆ ಮಾಡಿದರು. ಅದಕ್ಕೆ ಮಕುಟವಿಟ್ಟಂತೆ ಬೃಹತ್ ಪ್ರಮಾಣದ ಕನ್ನಡ ಕೋಶವನ್ನು ರಚಿಸಿದರು. ರೆವರೆಂಡ್ ಆಗಿ ಇಲ್ಲಿಗೆ ಬಂದು ಕನ್ನಡ ವಿಷಯಕವಾದ ಡಾಕ್ಟರೇಟನ್ನೂ ಪಡೆದರು.

ಪ್ರಕೃತ ಅವರ ಜೀವನ, ಸಾಧನೆಗಳನ್ನು ಕುರಿತು ಸುಗಮ ಶೈಲಿಯಲ್ಲಿ ಬರೆದಿರುವ ಡಾ. ಶ್ರೀನಿವಾಸ ಹಾವನೂರರು ಕಳೆದ ಮೂರು ದಶಕಗಳಿಂದ ಕಿಟೆಲ್ ವಿಷಯವಾಗಿ ಸಂಶೋಧನ ದೃಷ್ಟಿಯ ಲೇಖನ, ಉಪನ್ಯಾಸಾದಿ ಕೊಡಮಾಡಿದವರು. ಕಿಟೆಲ್ ವಿಚಾರದಲ್ಲಿ ಓರ್ವ ಅಥಾರಿಟಿ (authority) ಎನಿಸಿಕೊಂಡವರು.